24ನೇ ವೈಜ್ಞಾನಿಕ ಸಲಹಾ ಸಮಿತಿಯ ಕಾರ್ಯಸೂಚಿಯ ಪಟ್ಟಿ ಹಾಗೂ ಪ್ರಗತಿ ವರದಿ **(ಜನವರಿ 2023 ರಿಂದ ಡಿಸೆಂಬರ್ 2024 ರವರೆಗೆ)**		
ಕಾರ್ಯಸೂಚಿಗಳ ಸಂಖ್ಯೆ	**ವಿವರ**	**ನಡೆಸಿಕೊಡುವವರು**
	ಐ.ಸಿ.ಎ.ಆರ್, ಗೀತೆ	
	ಸ್ವಾಗತ	**ಡಾ. ಹನುಮಂತಪ್ಪ ಶ್ರೀಹರಿ** ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು, ಐಸಿಎಆರ್–ಕೃ.ವಿ.ಕೇ., ರಾಯಚೂರು
01	ಪ್ರಾಸ್ತಾವಿಕ ನುಡಿ	**ಡಾ. ಬಿ.ಟಿ. ರಾಯುಡು** ಪ್ರಧಾನ ವಿಜ್ಞಾನಿಗಳು ಮತ್ತು ನೋಡಲ್ ಅಧಿಕಾರಿ, ಅಟಾರಿ, ಬೆಂಗಳೂರು
02	ಕೃಷಿ ವಿಜ್ಞಾನ ಕೇಂದ್ರದ ಬಗ್ಗೆ ಅಧ್ಯಕ್ಷರ ಅನಿಸಿಕೆ	**ಡಾ. ಎಂ. ಹನುಮಂತಪ್ಪ** ಗೌರವಾನ್ವಿತ ಕುಲಪತಿಗಳು ಕೃ.ವಿ.ವಿ., ರಾಯಚೂರು
03	ವೈಜ್ಞಾನಿಕ ಸಲಹಾ ಸಮಿತಿ ಸದಸ್ಯರ ಸ್ವ–ಪರಿಚಯ	**ಸದಸ್ಯರಿಂದ**
04	ವರದಿ ಮಂಡನೆ	**ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು** ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ರಾಯಚೂರು
05	ಕೈಗೊಂಡ ಕಾರ್ಯಕ್ರಮಗಳ ವರದಿ ಮಂಡನೆ	**ವಿಜ್ಞಾನಿಗಳು** ಐಸಿಎಆರ್– ಕೃಷಿ ವಿಜ್ಞಾನ ಕೇಂದ್ರ, ರಾಯಚೂರು
06	ಚರ್ಚೆ	**ಸದಸ್ಯರಿಂದ**
07	ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚೆ	ಅಧ್ಯಕ್ಷರು ಮತ್ತು ಪ್ರಧಾನ ವಿಜ್ಞಾನಿಗಳು
08	ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರ ವಿಷಯಗಳ ಬಗ್ಗೆ ಚರ್ಚೆ	
	ವಂದನಾರ್ಪಣೆ	**ಡಾ. ಹೇಮಲಾತ ಕೆ.ಜೆ.** ವಿಜ್ಞಾನಿ (ತೋಟಗಾರಿಕೆ) ಐಸಿಎಆರ್–ಕೃ.ವಿ.ಕೇಂದ್ರ, ರಾಯಚೂರು
	ರಾಷ್ಟ್ರಗೀತೆ	

ಕಾರ್ಯಸೂಚಿಗಳು ***ಕಾರ್ಯಸೂಚಿ ಸಂಖ್ಯೆ 1*** **ಅಧ್ಯಕ್ಷರಿಂದ ಪೀಠಿಕೆ**		
ಅ) ಸಂಸ್ಥೆಯ ವಿವರಗಳು		
ಕ್ರ. ಸ.	**ವಿಷಯಗಳು**	**ವಿವರಗಳು**
01	ಕೃಷಿ ವಿಜ್ಞಾನ ಕೇಂದ್ರದ ಹೆಸರು	ಐಸಿಎಆರ್ – ಕೃಷಿ ವಿಜ್ಞಾನ ಕೇಂದ್ರ, ರಾಯಚೂರು
02	ಕೃಷಿ ವಿಜ್ಞಾನ ಕೇಂದ್ರದ ಅಂಚೆ ವಿಳಾಸ	ಕೃಷಿ ವಿಜ್ಞಾನ ಕೇಂದ್ರ, ಅಂಚೆ ಪೆಟ್ಟಿಗೆ ಸಂಖ್ಯೆ: 329, ಕೃ.ವಿ.ವಿ. ಆವರಣ ರಾಯಚೂರು–584104
03	ಕೃಷಿ ವಿಜ್ಞಾನ ಕೇಂದ್ರದ ದೂರವಾಣಿ ಸಂಖ್ಯೆ, ಫ್ಯಾಕ್ಸ್, ಇಮೇಲ್ ಮತ್ತು ಅಂತರ್‌ಜಾಲ ವಿಳಾಸ	**ಕಛೇರಿ** : 08532–220196 **ಮೊ** : 9480696314 **ಫ್ಯಾಕ್ಸ್** : 08532–220196 **ಇ–ಮೇಲ್** : kvk.Raichur@icar.gov.in pckvkraichur@uasraichur.edu.in **ವೆಬ್‌ಸೈಟ್** : www.kvkraichur.icar.gov.in
04	ಮಾತೃ ಸಂಸ್ಥೆಯ ಹೆಸರು	ಕೃಷಿ ವಿಶ್ವವಿದ್ಯಾಲಯ, ರಾಯಚೂರು
05	ಮಾತೃ ಸಂಸ್ಥೆಯ ಹೆಸರು ಅಂಚೆ ವಿಳಾಸ	ಕೃಷಿ ವಿಶ್ವವಿದ್ಯಾಲಯ, ರಾಯಚೂರು, ಅಂಚೆ ಪೆಟ್ಟಿಗೆ ಸಂಖ್ಯೆ : 329, ರಾಯಚೂರ – 584103, ಕರ್ನಾಟಕ ರಾಜ್ಯ
06	ಮಾತೃ ಸಂಸ್ಥೆಯ ದೂರವಾಣಿ ಸಂಖ್ಯೆ, ಫ್ಯಾಕ್ಸ್, ಇಮೇಲ್ ಮತ್ತು ಅಂತರ್‌ಜಾಲ ವಿಳಾಸ	**ಕಛೇರಿ** : 08532 – 221444 **ಫ್ಯಾಕ್ಸ್** : 08532 – 220240(253) ಇಮೇಲ್ : vc@uasraichur.edu.in , vcuasraichur@gmail.com **ವೆಬ್‌ಸೈಟ್** : www.uasraichur.edu.in
07	ಕೃಷಿ ವಿಜ್ಞಾನ ಕೇಂದ್ರ ಮಂಜೂರಾಗಿರುವ ಅದೇಶದ ವಿವರ	ಡಿಸೆಂಬರ್, 1994
08	ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರ ಹೆಸರು	**ಡಾ. ಹನುಮಂತಪ್ಪ ಶ್ರೀಹರಿ**
09	ಕೃಷಿ ವಿಜ್ಞಾನ ಕೇಂದ್ರ ಹೊಂದಿರುವ ಕ್ಷೇತ್ರದ ವಿವರ	ಡಿಸೆಂಬರ್, 1994

ಆ) ಧ್ಯೇಯೋದ್ದೇಶಗಳು

ಪರಿಕಲ್ಪನೆ:

ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೇರಿತ ಬೆಳವಣಿಗೆಯಿಂದ, ಕೃಷಿಯಲ್ಲಿ ಉತ್ಪಾದಕತೆ, ಲಾಭದಾಯಕತೆ ಮತ್ತು ಸುಸ್ಥಿರತೆಯನ್ನು ಸಾಧಿಸುವುದು.

ಪ್ರಚಾರ:

ಸೂಕ್ತ ತಂತ್ರಜ್ಞಾನಗಳ ಬಳಕೆಯಿಂದ ರೈತ ವಿಶೇಷವಾಗಿ ಕೃಷಿ ಪರಿಸರ ದೃಷ್ಟಿಕೋನದಿಂದ ರೈತಕೇಂದ್ರಿತ ಅಭಿವೃದ್ಧಿಯನ್ನು ಸಾಧಿಸುವುದು.

ಧ್ಯೇಯೋದ್ದೇಶ:

ತಂತ್ರಜ್ಞಾನದ ಉಪಯೋಗ ಮತ್ತು ಸಬಲೀಕರಣಕ್ಕಾಗಿ ಅದರ ಪರಿಶೀಲನೆ ಮತ್ತು ಪ್ರಾತ್ಯಕ್ಷಿಕೆ

ಚಟುವಟಿಕೆಗಳು:

1. ವಿವಿಧ ಬೆಳೆ ಮತ್ತು ಕೃಷಿ ಪದ್ಧತಿಗಳಲ್ಲಿ ಸ್ಥಳೀಯ ಪರಿಸ್ಥಿತಿಗನುಗುಣವಾಗಿ ಕೃಷಿ ತಾಂತ್ರಿಕತೆಗಳನ್ನು ಗುರುತಿಸಿ ಪರಿಶೀಲಿಸುವುದು.

2. ರೈತರ ಜಮೀನುಗಳ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲು ಮುಂಚೂಣಿ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳುವುದು.

3. ರೈತರ ಕೃಷಿ ಜ್ಞಾನವನ್ನು ನವೀಕರಿಸಲು, ಅವಶ್ಯಕತೆಗಳಿಗನುಗುಣವಾಗಿ ಮತ್ತು ಆಧುನಿಕ ಕೃಷಿ ತಾಂತ್ರಿಕತೆಗಳ ಕುಶಲತೆಯನ್ನು ಹೆಚ್ಚಿಸಲು ರೈತರಿಗೆ ತರಬೇತಿಗಳನ್ನು ಹಮ್ಮಿಕೊಳ್ಳುವುದು ಹಾಗೂ ವಿವಿಧ ಇಲಾಖೆಗಳ ವಿಸ್ತರಣಾ ಕಾರ್ಯಕರ್ತರಿಗೆ ಅಭಿವೃದ್ಧಿ ಪಡಿಸಿದ ತಾಂತ್ರಿಕತೆಗಳನ್ನು ಪರಿಚಯಿಸುವುದು.

4. ಜಿಲ್ಲೆಯ ಕೃಷಿ ಆರ್ಥಿಕತೆಯನ್ನು ಸುಧಾರಿಸಲು ಸರಕಾರಿ, ಖಾಸಗಿ ಮತ್ತು ಸ್ವಯಂ ಸೇವಾ ವಲಯಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಮತ್ತು ಸಂಪನ್ಮೂಲ ಕೇಂದ್ರದಂತೆ ಕಾರ್ಯ ನಿರ್ವಹಿಸುವುದು.

5. ಕೃಷಿ ವಿಸ್ತರಣಾ ಚಟುವಟಿಕೆಗಳ ಮೂಲಕ ಕೃಷಿ ಆಶ್ರಿತ ಕಕ್ಷಿದಾರರಿಗೆ ಕೃಷಿ ತಂತ್ರಜ್ಞಾನ ಮಾಹಿತಿಯ ಅರಿವು ಮೂಡಿಸುವುದು.

ಇ) ಸಿಬ್ಬಂದಿಗಳ ವಿವರ (ದಿನಾಂಕ 19–12–2024 ರ ವರೆಗೆ)

ಕ್ರ.ಸಂ.	ಮಂಜೂರಾದ ಹುದ್ದೆ	ಸಿಬ್ಬಂದಿಯ ಹೆಸರು	ಪದನಾಮ	ವಿಷಯ	ವಿದ್ಯಾರ್ಹತೆ	ವೇತನ	ಹಾಜರಾದ ದಿನಾಂಕ	ಖಾಯಂ/ ತಾತ್ಕಾಲಿಕ
1	ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರು	ಡಾ. ಹನುಮಂತಪ್ಪ ಶ್ರೀಹರಿ	ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರು	ಕೃಷಿ ಕೀಟಶಾಸ್ತ್ರ	ಪಿ.ಎಚ್.ಡಿ	37400–67000	23.12.2023	ಖಾಯಂ
2	ವಿಜ್ಞಾನಿ	ಡಾ. ಕೆ.ಜೆ. ಹೇಮಲತಾ	ವಿಜ್ಞಾನಿ	ತೋಟಗಾರಿಕೆ	ಪಿ.ಎಚ್.ಡಿ	68900–205500	20.06.2017	ಖಾಯಂ
3	ವಿಜ್ಞಾನಿ	ಡಾ. ಶ್ರೀವಾಣಿ, ಜಿ.ಎನ್.	ವಿಜ್ಞಾನಿ	ಕೃಷಿ ಕೀಟಶಾಸ್ತ್ರ	ಪಿ.ಎಚ್.ಡಿ	68900–205500	02.08.2018	ಖಾಯಂ
4	ವಿಜ್ಞಾನಿ	ಶ್ರೀಮತಿ. ವೀಣಾ , ಟಿ	ವಿಜ್ಞಾನಿ	ಆಹಾರ ತಂತ್ರಜ್ಞಾನ ಮತ್ತು ಸಂಸ್ಕರಣೆ	ಎಮ್.ಟೆಕ್	68900–205500	07.04.2017	ಖಾಯಂ
5	ವಿಜ್ಞಾನಿ	–	ವಿಜ್ಞಾನಿ	ಮಣ್ಣು ವಿಜ್ಞಾನ	–	–	–	ಖಾಲಿ
6	ವಿಜ್ಞಾನಿ	–	ವಿಜ್ಞಾನಿ	ಬೇಸಾಯ ಶಾಸ್ತ್ರ	–	–	–	ಖಾಲಿ
7	ವಿಜ್ಞಾನಿ	–	ವಿಜ್ಞಾನಿ	ಸಸ್ಯರೋಗ ಶಾಸ್ತ್ರ	–	–	–	ಖಾಲಿ
8	ಕಾರ್ಯಕ್ರಮ ಸಹಾಯಕರು (ಗಣಕಯಂತ್ರ)	ಶ್ರೀ. ದೇವರಾಜ ನಾಯಕ್	ತಾಂತ್ರಿಕ ಅಧಿಕಾರಿಗಳು	ಗಣಕಯಂತ್ರ	ಎಮ್.ಸಿ.ಎ,	44900–142400	25–03–2017	ಖಾಯಂ
9	ಕ್ಷೇತ್ರ ವ್ಯವಸ್ಥಾಪಕರು	–	ಕ್ಷೇತ್ರ ವ್ಯವಸ್ಥಾಪಕರು	ಕೃಷಿ	–	–	–	ಖಾಲಿ
10	ಕಾರ್ಯಕ್ರಮ ಸಹಾಯಕರು (ಮಣ್ಣು ವಿಜ್ಞಾನ)	–	ಪ್ರಯೋಗ ಶಾಲಾ ತಂತ್ರಜ್ಞರು	ಕೃಷಿ	–	–	–	ಖಾಲಿ
11	ಲೆಕ್ಕಿಗರು/ಅಧೀಕ್ಷಕರು	ಶ್ರೀ. ಶಿವಯೋಗಿ	ಹಿರಿಯ ಸಹಾಯಕ	ಕಲಾ	ಬಿ.ಎ	30900–70850	01–08–2023	ಖಾಯಂ
12	ಲೆಕ್ಕಿಗರು/ ಟೈಪಿಸ್ಟ್ ಕಂ–ಅಪರೇಟರ್	ಶ್ರೀಮತಿ. ಸುಮಂಗಳಮ್ಮ ಎಂ.	ಸಹಾಯಕರು	ಕಲಾ	ಬಿ.ಎ	30350–58200	04–12–2017	ಖಾಯಂ
13	ಚಾಲಕ–1	ಶ್ರೀ ಈಶಪ್ಪ ಅಸ್ಕಿಹಾಳ್	ಟ್ರ್ಯಾಕ್ಟರ್ ಚಾಲಕ	–	ಎಸ್.ಎಸ್.ಎಲ್.ಸಿ	30350–58200	06–02–1999	ಖಾಯಂ
14	ಚಾಲಕ–2	ಶ್ರೀ ಚನ್ನಪ್ಪ ಅಸ್ಕಿಹಾಳ್	ಭಾರಿ ವಾಹನ ಚಾಲಕ	–	ಎಸ್.ಎಸ್.ಎಲ್.ಸಿ	30350–58200	01–04–2017	ಖಾಯಂ
15	ಪಾರಿಚಾರಕರು	ಶ್ರೀಮತಿ ಶ್ರೀದೇವಿ ಎಸ್. ತಳವಾರ್	ಸುದ್ಧಿವಾಹಕಿ	–	ಪಿ.ಯು.ಸಿ	30350–58200	20–07–2012	ಖಾಯಂ
16	ಅಡುಗೆ ಸಹಾಯಕರು	ಶ್ರೀ ಅಂಜನೇಯ	ಅಡುಗೆ ಸಹಾಯಕ	–	ಎಸ್.ಎಸ್.ಎಲ್.ಸಿ	21400–42000	09–01–2012	ಖಾಯಂ

ಕಾರ್ಯ ಸೂಚಿ ಸಂಖ್ಯೆ 02

ವೈಜ್ಞಾನಿಕ ಸಲಹಾ ಸಮಿತಿ ಸಂರಚನೆ ಮತ್ತು ವೈಜ್ಞಾನಿಕ ಸಲಹಾ ಸಮಿತಿಯ ಸದಸ್ಯರು ಹಾಗೂ ಆಹ್ವಾನಿತರ ಸ್ವ ಪರಿಚಯ

ವೈಜ್ಞಾನಿಕ ಸಲಹಾ ಸಮಿತಿಯ ಸಂರಚನೆಯನ್ನು ಕೆಳಗೆ ನೀಡಲಾಗಿದೆ

ಕ್ರ. ಸಂಖ್ಯೆ	ವೈಜ್ಞಾನಿಕ ಸಲಹಾ ಸಮಿತಿಯ ಸಂಯೋಜಕರು	ಹೆಸರು ಮತ್ತು ಹುದ್ದೆ	ಪದನಾಮ
1.	ಆತಿಥೇಯ ಸಂಸ್ಥೆಯ ಮುಖ್ಯಸ್ಥರು	**ಡಾ. ಎಂ. ಹನುಮಂತಪ್ಪ,** ಗೌರವಾನ್ವಿತ ಕುಲಪತಿಗಳು ಕೃ.ವಿ.ವಿ., ರಾಯಚೂರು	ಅಧ್ಯಕ್ಷರು
2.	ನಿರ್ದೇಶಕರು, ಅಟಾರಿ, ಬೆಂಗಳೂರು	**ಡಾ. ವಿ. ವೆಂಕಟಸುಬ್ರಮಣ್ಯನ್,** ನಿರ್ದೇಶಕರು, ಅಟಾರಿ, ಬೆಂಗಳೂರು **ಡಾ. ಬಿ. ಟಿ. ರಾಯುಡು,** ಪ್ರಧಾನ ವಿಜ್ಞಾನಿ (ಕೃಷಿ ವಿಸ್ತರಣಾ) ಎ.ಟಿ.ಎ.ಆರ್.ಐ., ಬೆಂಗಳೂರು	ಸದಸ್ಯರು
3.	ಸಂಬಂಧಪಟ್ಟ SAU/CAU ನ ವಿಸ್ತರಣಾ ಶಿಕ್ಷಣದ ನಿರ್ದೇಶಕರು	**ಡಾ. ಬಿ.ಕೆ., ದೇಸಾಯಿ, ಸಂಶೋಧನಾ ನಿರ್ದೇಶಕರು, ಕೃ.ವಿ.ವಿ. ರಾಯಚೂರು** **ಡಾ.ಶಿವಶಂಕರ ಎನ್.,** ಮಾನ್ಯ ವಿಸ್ತರಣಾ ನಿರ್ದೇಶಕರು, ಕೃ.ವಿ.ವಿ. ರಾಯಚೂರು **ಡಾ. ಅಮರೇಗೌಡ ಎ.,** ಮುಖ್ಯಸ್ಥರು, ಮುಖ್ಯ ಸಂಶೋಧನಾ ಕೇಂದ್ರ, ರಾಯಚೂರು **ಡಾ. ಎ. ಆರ್. ಕುರುಬರ,** ಸಹ ವಿಸ್ತರಣಾ ನಿರ್ದೇಶಕರು, ಕೃ.ವಿ.ವಿ. ರಾಯಚೂರು	ಸದಸ್ಯರು
4.	ಜಿಲ್ಲೆ ಅಥವಾ ಸಮೀಪದಲ್ಲಿದ್ದರೆ ICAR ಸಂಸ್ಥೆ/ ICAR ಪ್ರಾದೇಶಿಕ ಸಂಶೋಧನಾ ಕೇಂದ್ರದ ಪ್ರತಿನಿಧಿ	**ಡಾ. ಬಿ. ಕೃಷ್ಣ ರಾವ್, ಮುಖ್ಯಸ್ಥರು,** ಐ.ಸಿ.ಎ.ಆರ್.–ಐ.ಐ.ಎಸ್.ಡಬ್ಲೂ.ಸಿ. (ಪ್ರಾದೇಶಿಕ ಕೇಂದ್ರ), ಬಳ್ಳಾರಿ	ಸದಸ್ಯರು
5.	ಆತಿಥೇಯ ಸಂಸ್ಥೆಯ ಮುಖ್ಯಸ್ಥರಿಂದ ನಾಮ ನಿರ್ದೇಶನಗೊಂಡ ಬೆಳೆ ವಿಜ್ಞಾನ ಮತ್ತು ಪ್ರಾಣಿ ವಿಜ್ಞಾನಗಳನ್ನು ಪ್ರತಿನಿಧಿಸುವ ಪ್ರಾಧ್ಯಾಪಕ ಶ್ರೇಣಿಯ ಇಬ್ಬರು ತಜ್ಞರು	**ಡಾ. ಅರುಣಕುಮಾರ ಹೊಸಮನಿ,** ವಿಶೇಷ ಅಧಿಕಾರಿಗಳು, ಬೀಜ ಘಟಕ, ಕೃ.ವಿ.ವಿ., ರಾಯಚುರು **ಡಾ. ಜಗಜೀವನ ರಾಮ್,** ಮುಖ್ಯಸ್ಥರು, ಪ್ರಾಣಿ ವಿಜ್ಞಾನ, ಕೃ.ಮ.ವಿ., ರಾಯಚುರು	ಸದಸ್ಯರು
6.	ಆತ್ಮ ಯೋಜನೆಯ ನಿರ್ದೇಶಕರು	**ಶ್ರೀ. ಜಯಪ್ರಕಾಶ ಟಿ.ಸಿ.,** ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ರಾಯಚೂರು	ಸದಸ್ಯರು
7.	ನಬಾರ್ಡ್‌ನ ಪ್ರತಿನಿಧಿ	**ಶ್ರೀಮತಿ. ಕಲಾವತಿ,** ಜಿಲ್ಲಾ ಅಭಿವೃದ್ಧಿ ವ್ಯವಸ್ಥಾಪಕರು (ಡಿಡಿಎಂ), ನಬಾರ್ಡ್, ರಾಯಚೂರು	ಸದಸ್ಯರು
8.	ಸಭೆಯ ಅಗತ್ಯ ಮತ್ತು ಅಜೆಂಡಾದ ಪ್ರಕಾರ ಲೈನ್ ಇಲಾಖೆಗಳಿಂದ (ಜಿಲ್ಲಾ ಅಧಿಕಾರಿ) ಇಬ್ಬರು ಪ್ರತಿನಿಧಿಗಳು	1. **ಶ್ರೀ. ಮಹಮ್ಮದ್ ಅಲಿ,** ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ರಾಯಚೂರು 2. **ಡಾ. ಅಶೋಕ ಕೋಲಕಾರ,** ಉಪ ನಿರ್ದೇಶಕರು, ಪಶು ಸಂಗೋಪನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ರಾಯಚೂರು	ಸದಸ್ಯರು
9.	ಆತಿಥೇಯ ಸಂಸ್ಥೆಯ ಮುಖ್ಯಸ್ಥರಿಂದ ನಾಮ ನಿರ್ದೇಶನಗೊಂಡ ಜಿಲ್ಲೆಯ ಒಬ್ಬ ಪ್ರಗತಿಪರ ರೈತ	**ಶ್ರೀ. ಸುರೇಶ ರೆಡ್ಡಿ ತಂದೆ ರಘುರೆಡ್ಡಿ** ಗ್ರಾಮ: ಎಚ್. ತಿಮ್ಮಾಪುರ ತಾ. ಮತ್ತು ಜಿ: ರಾಯಚೂರು	ಸದಸ್ಯರು

	(ಪುರುಷ/ಮಹಿಳೆ)		
10.	ಆತಿಥೇಯ ಸಂಸ್ಥೆಯ ಮುಖ್ಯಸ್ಥರಿಂದ ನಾಮ ನಿರ್ದೇಶನಗೊಂಡ ಜಿಲ್ಲೆಯ ಒಬ್ಬ ಕೃಷಿ ಉದ್ಯಮಿ	**ಶ್ರೀ. ಮಲ್ಲಿಕಾರ್ಜುನ ತಂದೆ ಶೇಖರಪ್ಪ** ಗ್ರಾಮ: **ಕಲಮಂಗಿ** ತಾ: ಸಿಂದನೂರು ಜಿ: ರಾಯಚೂರು	ಸದಸ್ಯರು
11.	ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು, ಕೃ.ವಿ.ಕೇಂ,	**ಡಾ. ಹನುಮಂತಪ್ಪ ಶ್ರೀಹರಿ,** ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ರಾಯಚೂರು	ಸದಸ್ಯರು
12.	**ವಿಶೇಷ ಆಹ್ವಾನಿತರು**	➢ ಡಾ. ಎಂ. ಹನುಮಂತಪ್ಪ, ಗೌರವಾನ್ವಿತ ಕುಲಪತಿಗಳು, ಕೃ.ವಿ.ವಿ., ರಾಯಚೂರು ➢ ಡಾ. ವಿ. ವೆಂಕಟಸುಬ್ರಮಣ್ಯನ್, ನಿರ್ದೇಶಕರು, ಅಟಾರಿ, ಬೆಂಗಳೂರು ➢ ಡಾ. ಶಿವಶಂಕರ ಎನ್., ಮಾನ್ಯ ವಿಸ್ತರಣಾ ನಿರ್ದೇಶಕರು, ಕೃ.ವಿ.ವಿ. ರಾಯಚೂರು ➢ ಡಾ. ಬಿ.ಕೆ., ದೇಸಾಯಿ, ಸಂಶೋಧನಾ ನಿರ್ದೇಶಕರು, ಕೃ.ವಿ.ವಿ. ರಾಯಚೂರು ➢ ಡಾ. ಬಿ. ಕೃಷ್ಣ ರಾವ್, ಮುಖ್ಯಸ್ಥರು, ಐ.ಸಿ.ಎ.ಆರ್.–ಐ.ಐ.ಎಸ್.ಡಬ್ಲೂ.ಸಿ. (ಪ್ರಾದೇಶಿಕ ಕೇಂದ್ರ), ಬಳ್ಳಾರಿ ➢ ಡಾ. ಅಮರೇಗೌಡ ಎ., ಮುಖ್ಯಸ್ಥರು, ಮುಖ್ಯ ಸಂಶೋಧನಾ ಕೇಂದ್ರ, ರಾಯಚೂರು ➢ ಡಾ. ಎ. ಆರ್. ಕುರುಬರ, ಸಹ ವಿಸ್ತರಣಾ ನಿರ್ದೇಶಕರು, ಕೃ.ವಿ.ವಿ. ರಾಯಚೂರು ➢ ಡಾ. ಅರುಣಕುಮಾರ ಹೊಸಮನಿ, ವಿಶೇಷ ಅಧಿಕಾರಿಗಳು, ಬೀಜ ಘಟಕ, ಕೃ.ವಿ.ವಿ., ರಾಯಚೂರು ➢ ಡಾ. ಜಗಜೀವನರಾಮ್, ಮುಖ್ಯಸ್ಥರು, ಪ್ರಾಣಿ ವಿಜ್ಞಾನ, ಕೃ.ತಾಂ.ಮ.ವಿ., ರಾಯಚೂರು ➢ ಶ್ರೀ. ಜಯಪ್ರಕಾಶ ಟಿ.ಸಿ., ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ರಾಯಚೂರು ➢ ಯೋಜನಾ ನಿರ್ದೇಶಕರು (ಆತ್ಮ) ಕೃಷಿ ಇಲಾಖೆ, ರಾಯಚೂರು ➢ ಶ್ರೀಮತಿ. ಕಲಾವತಿ, ಜಿಲ್ಲಾ ಅಭಿವೃದ್ಧಿ ವ್ಯವಸ್ಥಾಪಕರು (ಡಿಡಿಎಂ), ನಬಾರ್ಡ್, ರಾಯಚೂರು ➢ ಶ್ರೀ. ಮಹಮ್ಮದ್ ಅಲಿ, ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ರಾಯಚೂರು ➢ ಡಾ. ಅಶೋಕ ಕೋಲಕಾರ, ಉಪ ನಿರ್ದೇಶಕರು, ಪಶು ಸಂಗೋಪನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ರಾಯಚೂರು ➢ ಶ್ರೀ. ನವಿನ ಕುಮಾರ ಯು., ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ರಾಯಚೂರು ➢ ಶ್ರೀ. ಸುರೇಶ ರೆಡ್ಡಿ ತಂದೆ ರಘುರೆಡ್ಡಿ, ಗ್ರಾಮ: ಎಚ್. ತಿಮ್ಮಾಪುರ ತಾ. ಮತ್ತು ಜಿ: ರಾಯಚೂರು ➢ ಶ್ರೀ. ಮಲ್ಲಿಕಾರ್ಜುನ ತಂದೆ ಶೇಖರಪ್ಪ ಗ್ರಾಮ: ಕಲಮಂಗಿ ತಾ: ಸಿನಂನೂರು ಜಿ: ರಾಯಚೂರು ➢ ಡಾ. ಹನುಮಂತಪ್ಪ ಶ್ರೀಹರಿ, ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ,	**ವಿಶೇಷ ಆಹ್ವಾನಿತರು**

		ರಾಯಚೂರು ➢ ಡಾ. ಎಂ. ಸಿ. ಚಂದ್ರಪ್ಪ, ಉಪ ನಿರ್ದೇಶಕರು, ರೇಷ್ಮೆ ಇಲಾಖೆ, ರಾಯಚೂರು ➢ ಶ್ರೀ. ಸುರೇಶ ಬಾಬು ಎಸ್., ಉಪ ಅರಣ್ಯ ಸಂರಕ್ಷಣಾ ಅಧಿಕಾರಿಗಳು(ಸಾಮಾಜಿಕ), ಅರಣ್ಯ ಇಲಾಖೆ, ರಾಯಚೂರು ➢ ಡಾ. ನಾಡಗೌಡ ಬಸನಗೌಡ, ಉಪ ನಿರ್ದೇಶಕರು, ಮೀನುಗಾರಿಕೆ ಇಲಾಖೆ, ರಾಯಚೂರು ➢ ನಿರ್ದೇಶಕರು/ವ್ಯವಸ್ಥಾಪಕರು, ಡಿ.ಸಿ.ಸಿ. ಬ್ಯಾಂಕ್, ರಾಯಚೂರು ➢ ಶ್ರೀ. ಪ್ರಭು ತುರಾಯಿ, ಉಪ ಬೀಜೋತ್ಪಾದನಾ ಅಧಿಕಾರಿಗಳು, ಕರ್ನಾಟಕ ರಾಜ್ಯ ಬೀಜ ನಿಗಮ, ರಾಯಚೂರು ➢ ಶ್ರೀ ಹನುಮಂತರೆಡ್ಡಿ, ಉಪ ವ್ಯವಸ್ಥಾಪಕ ನಿರ್ದೇಶಕರು, ಕೆಎಂಎಫ್, ರಾಯಚೂರು ➢ ಡಾ. ಡಿ. ಕೆ. ಹಾದಿಮನಿ, ತಾಂತ್ರಿಕ ಅಧಿಕಾರಿಗಳು, ವಿಸ್ತರಣಾ ನಿರ್ದೇಶನಾಲಯ, ಕೃ.ವಿ.ವಿ. ರಾಯಚೂರು ➢ ಡಾ. ವಿ. ಹನುಮಂತ ನಾಯಕ, ತಾಂತ್ರಿಕ ಅಧಿಕಾರಿಗಳು, ವಿಸ್ತರಣಾ ನಿರ್ದೇಶನಾಲಯ, ಕೃ.ವಿ.ವಿ. ರಾಯಚೂರು ➢ ಡಾ. ವಾಣಿಶ್ರೀ ಎಸ್., ವಿಸ್ತರಣಾ ಮುಂದಾಳು, ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ, ಲಿಂಗಸೂಗೂರು ➢ ಡಾ. ದೇವೆಂದ್ರ ಬೀರಲದಿನ್ನಿ, ವಿಸ್ತರಣಾ ಮುಂದಾಳು, ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ, ದೇವದುರ್ಗ ➢ ಶ್ರೀ. ಮೋಹನ ನಾಯ್ಕ, ಕಾರ್ಯಕ್ರಮ ಅಧಿಕಾರಿಗಳು, ಮೈರಡಾ ಯೋಜನೆ, ರಾಯಚೂರು ➢ ಶ್ರೀ. ಸಂಗಮೇಶ ಕಂಬಾರ, ನಿರ್ದೇಶಕರು, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ರಾಯಚೂರು	

ಕಾರ್ಯಸೂಚಿ ಸಂಖ್ಯೆ –03

ಹಿಂದಿನ ವೈಜ್ಞಾನಿಕ ಸಲಹಾ ಸಮಿತಿ ಸಭೆಯಲ್ಲಿ ನೀಡಿರುವ ಸಲಹೆಗಳಿಗೆ ತೆಗೆದುಕೊಂಡ ಕ್ರಮಗಳು

ಕ್ರಮ	ಶಿಫಾರಸ್ಸು	ಸಲಹೆಗಳು	ಕ್ರಮಗಳು
1.	**ವೈಜ್ಞಾನಿಕ ಸಲಹಾ ಸಮಿತಿ ಸಭೆಯ ಸದಸ್ಯರಗಳ ಸಲಹೆಗಳು**	ಕೃಷಿ ವಿಜ್ಞಾನ ಕೇಂದ್ರ, ರಾಯಚೂರಿನ ವಿಜ್ಞಾನಿಗಳು ಎಲ್ಲಾ ಇಲಾಖೆಗಳೊಂದಿಗೆ ಜೊತೆಗೂಡಿ ಕೆಲಸ ನಿರ್ವಹಿಸಬೇಕು ಎಂದು ತಿಳಿಸಿದರು. **(ಕ್ರಮ: ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು)**	• ತರಬೇತಿ ಕಾರ್ಯಕ್ರಮಗಳನ್ನು ಎಲ್ಲಾ ಇಲಾಖೆಗಳಾದ (ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ನಬಾರ್ಡ ಬ್ಯಾಂಕ, ಮೀನುಗಾರಿಕೆ ಮುಂತಾದವುಗಳೊಂದಿಗೆ) ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದೆ. • ದಿನಾಂಕ: 19.06.2024 ರಂದು ದ್ವೈಮಾಸಿಕ ಕಾರ್ಯಾಗಾರಗಳನ್ನು ನಡೆಸಲಾಗಿದೆ. ಕೃಷಿ ಸಖಿ, ಮೈತ್ರಿ, ಪಶು ಸಖಿ ರತರಬೇತಿಹಳನ್ನು ಹಮ್ಮಿಕೊಳ್ಳಲಗಿದೆ. • ದಿನಾಂಕ: 17.07.2024 ಹೊರ ಅವರಣ ತರಬೇತಿಯನ್ನು ಪುರತಿಪ್ಲಿ ಗ್ರಾಮದಲ್ಲಿ ನಡೆಸಲಾಗಿದೆ. • ಕುರ್ಡಿ ಗ್ರಾಮದಲ್ಲಿ ದಿನಾಂಕ: 7.11.2024 ಮತ್ತು ಪುರತಿಪ್ಲಿ ಗ್ರಾಮದಲ್ಲಿ ದಿನಾಂಕ: 27.11.2024 ರಂದು ಹತ್ತಿ ಬೆಳೆಯ ಸಾಂದ್ರ ಪದ್ಧತಿಯ ಕ್ಷೇತ್ರೋತ್ಸವಗಳನ್ನು ಹಮ್ಮಿಕೊಳ್ಳಲಾಗಿದೆ. • ವಿಶ್ವವಿದ್ಯಾಲಯದಿಂದ ನೀಡುವ ಕೃಷಿ ರತ್ನ ಪ್ರಶಸ್ತಿಯ ಆಯ್ಕೆ ಸಮಿತಿಯ ಸದಸ್ಯರಾಗಿರುತ್ತಾರೆ. (ದಿನಾಂಕ: 12.11.2024) • ಕೃಷಿ ಪಂಡಿತ್ ಪ್ರಶಸ್ತಿ ಆಯ್ಕೆಗಾಗಿ ಕೃಷಿ ಇಲಾಖೆ ಅಧಿಕಾರಿಗಳೊಂದಿಗೆ ರೈತರ ತಾಕುಗಳಿಗೆ ಕ್ಷೇತ್ರ ಭೇಟಿ ಮಾಡಲಾಗಿದೆ (ದಿನಾಂಕ: 26.11.2024) • ಕೃಷಿ ಸಂಬದಿತ ಎಲ್ಲಾ ಇಲಾಖೆ ಅಧಿಕಾರಿಗಳೊಂದಿಗೆ ವಿಶ್ವವಿದ್ಯಾಲಯದ ಕೃಷಿ ಮೇಳದಲ್ಲಿ ಶ್ರೇಷ್ಟ ಕೃಷಿಕ, ಶ್ರೇಷ್ಟ ಕೃಷಿ ಮಹಿಳೆ ಪ್ರಶಸ್ತಿಯ ಆಯ್ಕೆಗಾಗಿ ಸಮಿತಿಯೊಂದಿಗೆ ಕ್ಷೇತ್ರ ಭೇಟಿ ಮಾಡಿ ಕ್ರಮವಹಿಸಲಾಗಿದೆ (ದಿನಾಂಕ: 23–25.11.2024) • ವಿಶ್ವ ಮಣ್ಣು ದಿನಾಚರಣೆ ಆಚರಿಸಲಾಗಿದೆ (ದಿನಾಂಕ: 05–12.2024) • ಹಲವಾರು ಕ್ಷೇತ್ರೋತ್ಸವ, ತರಬೇತಿ, ಕ್ಷೇತ್ರ ಬೇಟಿ ಮುಂತಾದವಿಗಳನ್ನು ಮಾಡಲಾಗಿದೆ.
2.		ರೈತರ ಬೇಡಿಕೆ ಆಧಾರದ ಮೇರೆಗೆ ತೋಟಗಾರಿಕೆ ಸಸಿಗಳ ಉತ್ಪಾದನೆ ಮಾಡಬೇಕು ಇಲ್ಲವೆ ಬೇರೆಕಡೆಯಿಂದ ತರಿಸಿಕೊಂಡು ಸ್ಟಾಕ್‌ಗೆ ತೆಗೆದುಕೊಂಡು ನಂತರದಲ್ಲಿ ಮಾರಟ ಮಾಡಬೇಕು. **(ಕ್ರಮ: ವಿಜ್ಞಾನಿ (ತೋಟಗಾರಿಕೆ))**	• ದಿನಾಂಕ 19.11.2024. ರಂದು ಐ.ಐ.ಹೆಚ್.ಆರ್., ಬೆಂಗಳೂರು ಇವರ ಸಹಯೋಗದೊಂದಿಗೆ ರೈತರ ಬೇಡಿಕೆಯ ಆಧಾರದ ಮೇರಿಗೆ ಮಾವು (ಅರ್ಕಾ ಉದಯ), ಪೇರಲ (ಅರ್ಕಾ ಕಿರಣ್), ಸೀತಾಫಲ (ಅರ್ಕಾ ವಿಕ್ರಮ್) ಮತ್ತು ನೇರಳೆ (ದುಪದಾಲ್) ಗಿಡಗಳನ್ನು ರೈತರಿಗೆ ಟಿ.ಎಸ್.ಪಿ., ಯೋಜನೆಯಡಿಯಲ್ಲಿ ವಿತರಿಸಲಾಗಿದೆ. • ಡಾ. ದೇವೆಂದ್ರಪ್ಪ, ಹಿರಿಯ ವಿಜ್ಞಾನಿಗಳು ಐ.ಐ.ಹೆಚ್.ಆರ್., ಬೆಂಗಳೂರು ಇವರಿಗೆ ರೈತರ ಬೇಡಿಕೆಗೆ ಅನುಗುಣವಾಗಿ ಪಟ್ಟಿಯನ್ನು ಮಾಡಿ ಟಿ.ಎಸ್.ಪಿ. ಯೋಜನೆಯಡಿಯಲ್ಲಿ

ಕಾರ್ಯಸೂಚಿ ಸಂಖ್ಯೆ –03 ಹಿಂದಿನ ವೈಜ್ಞಾನಿಕ ಸಲಹಾ ಸಮಿತಿ ಸಭೆಯಲ್ಲಿ ನೀಡಿರುವ ಸಲಹೆಗಳಿಗೆ ತೆಗೆದುಕೊಂಡ ಕ್ರಮಗಳು			
ಕ್ರಮ	**ಶಿಫಾರಸ್ಸು**	**ಸಲಹೆಗಳು**	**ಕ್ರಮಗಳು**
			ಉಚಿತವಾಗಿ ಪೂರೈಕೆ ಮಾಡಲು ಮನವಿ ಮಾಡಿಕೊಳ್ಳಲಾಗಿದೆ. • ರೈತರ ಬೇಡಿಕೆಯ ಅನುಗುಣವಾಗಿ ಸಸಿಗಳ ಉತ್ಪಾದನೆಗೆ ಕೃಷಿ ವಿಜ್ಞಾನ ಕೇಂದ್ರಕ್ಕೆ ಇಂಡೆಂಟ್ ನೀಡುವಂತೆ ತೋಟಗಾರಿಕೆ ಇಲಾಖೆಗೆ ಪತ್ರವನ್ನು ಸಲ್ಲಿಸಲಾಗಿದೆ.
3.		ಕೃಷಿಗೆ ಸಂಬಂಧಿಸಿದ ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳೊಂದಿಗೆ ವಿಸ್ತರಣಾ ಚಟುವಟಿಕೆಗಳಲ್ಲಿ ರೈತರಿಗೆ ಅನುಕೂಲವಾಗುವಂತೆ ಕಾರ್ಯನಿರ್ವಹಿಸಬೇಕು. **(ಕ್ರಮ: ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು)**	• ಖಂಡಿಕೆ ಒಂದರಲ್ಲಿ ಮಾಹಿತಿ ನೀಡಿರುವಂತೆ ಕ್ರಮವಹಿಸಲಾಗಿದೆ.
4.		ರೈತರ ಆದಾಯ ದ್ವಿಗುಣಗೊಳಿಸುವ ಗ್ರಾಮಗಳಲ್ಲಿ ಪ್ರತಿಯೊಬ್ಬ ವಿಜ್ಞಾನಿಯು ತರಬೇತಿ ಕಾರ್ಯಕ್ರಮಗಳನ್ನು ಮಾಡ ಬೇಕು. **(ಕ್ರಮ: ಎಲ್ಲಾ ವಿಜ್ಞಾನಿಗಳು)**	• ದಿನಾಂಕ: 13.11.2024 ರಂದು ಜಕ್ಕಲದಿನ್ನಿ ಗ್ರಾಮದಲ್ಲಿ ಕೆಂಪು ಮೆಣಸಿನಕಯಿಯನ್ನು ಸೋಲಾರ್ ಡ್ರೈಯರ್ ಮೂಲಕ ಒಣಗಿಸುವ ಪದ್ಧತಿ ಪ್ರಾತ್ಯಕ್ಷಿಕೆ ಕೈಗೊಳ್ಳಲಾಯಿತು. • ಜಕ್ಕಲದಿನ್ನಿ ಗ್ರಾಮದಲ್ಲಿ ದಿನಾಂಕ: 12.12.2024 ರಂದು ಪ್ಯಾಡಿ ಬೇಲರ್‌ನ ಪ್ರಾತ್ಯಕ್ಷಿಕೆಯ ಜೊತೆಗೆ ಕ್ಷೇತ್ರೋತ್ಸವ ನಡೆಸಲಾಯಿತು. ಸುಮಾರು 30 ರೈತರು ಪಾಲ್ಗೊಂಡು, ತಂತ್ರಜ್ಞಾನದ ಮಾಹಿತಿ ಪಡೆದುಕೊಂಡರು. • ಮಂಡಲಗೇರಾ ಗ್ರಾಮದಲ್ಲಿ ತರಕಾರಿ ಬೆಳೆಗಳಲ್ಲಿ ಸಮಗ್ರ ಬೆಳೆ ನಿರ್ವಹಣೆ ಮಾವು ಬೆಳೆಯಲ್ಲಿ ಸಮಗ್ರ ಕೀಟ & ರೋಗ ನಿರ್ವಹಣೆ ಕುರಿತು ಗುಂಪು ಚರ್ಚೆಯಲ್ಲಿ ಮಾಹಿತಿ ನೀಡಲಾಯಿತು. • ಶ್ರೀರಾಮನಗರ ಕ್ಯಾಂಪ್‌ನ್‌ಲ್ಲಿ ಉತ್ತಮ ಆದಾಯ ಕೊಡುವ ಪರ್ಯಾಯ ಬೆಳೆಯಾದ ಸೋಯಾ ಅವರೆಯ ಮುಂಚೂಣಿ ಪ್ರಾತ್ಯಕ್ಷಿಕೆ ಕೈಗೊಂಡು ತರಬೇತಿ ಹಾಗೂ ಕ್ಷೇತ್ರೋತ್ಸವವನ್ನು ಮಾಡಲಾಗಿದೆ. • ಹೀರುಂಡಿ ಗ್ರಾಮದಲ್ಲಿ ತೊಗರಿ ತಳಿ, ಜಿ.ಆರ್.ಜಿ–811, ಲಿಂಗಸೂಗುರು, ಸಂತೆಕಲ್ಲೂರು ಗ್ರಾಮಗಳಲ್ಲಿ ಟಿ.ಎಸ್.–3ಆರ್ ನ್ನು ಗುಚ್ಚ ಪ್ರಾತ್ಯಕ್ಷಿಕೆಯಾಗಿ ಕೈಗೊಳ್ಳಲಾಗಿದೆ. • ಅಧಿಕ ಸಾಂದ್ರ ಪದ್ಧತಿ ಹತ್ತಿ ಬೇಸಾಯದ ಪ್ರಾತ್ಯಕ್ಷಿಕೆ ಹಾಗೂ ತರಬೇತಿಗಳನ್ನು ನೀಡಲಾಗಿದೆ. • ಮಂಡಲಗೇರಾ ಗ್ರಾಮದಲ್ಲಿ ಸೌತೆಕಾಯಿ ಮತ್ತು ಹೀರೆಕಾಯಿ ಬೆಳೆಯಲ್ಲಿ ಮುಂಚೂಣಿ

ಕಾರ್ಯಸೂಚಿ ಸಂಖ್ಯೆ –03

ಹಿಂದಿನ ವೈಜ್ಞಾನಿಕ ಸಲಹಾ ಸಮಿತಿ ಸಭೆಯಲ್ಲಿ ನೀಡಿರುವ ಸಲಹೆಗಳಿಗೆ ತೆಗೆದುಕೊಂಡ ಕ್ರಮಗಳು

ಕ್ರಮ	ಶಿಫಾರಸ್ಸು	ಸಲಹೆಗಳು	ಕ್ರಮಗಳು
			ಪ್ರಾತ್ಯಕ್ಷಿಕೆಯನ್ನು ಕೈಗೊಳ್ಳಲಾಗಿದೆ.
5.		ಒಂದು ಜಿಲ್ಲೆ ಒಂದು ಉತ್ಪನ್ನ ಬೆಳೆಯಾದ ಮೆಣಸಿನಕಾಯಿಯ ಕ್ಷೋಯೋತ್ತರ ತಂತ್ರಜ್ಞಾನಗಳು, ಸಂಸ್ಕರಣೆ, ಮೌಲ್ಯವರ್ಧನೆ, ಮಾರುಕಟ್ಟೆ ಸಂಪರ್ಕಕ್ಕೆ ಸಂಬಂಧಿಸಿದಂತೆ ಕ್ರಿಯಾ ಯೋಜನೆಯಲ್ಲಿ ಮುಂಚೂಣಿ ಪ್ರಾತ್ಯಕ್ಷಿಕೆಯನ್ನು ತೆಗೆದುಕೊಳ್ಳಬೇಕು. **(ಕ್ರಮ: ಎಲ್ಲಾ ವಿಜ್ಞಾನಿಗಳು)**	• 2023–24ನೇ ಸಾಲಿನಲ್ಲಿ **"**ಕೆಂಪು ಮೆಣಸಿನಕಾಯಿಯನ್ನು ಸೋಲಾರ್ ಡ್ರೈಯರ್ ಮೂಲಕ ಒಣಗಿಸುವ ಪದ್ಧತಿ ಪ್ರಾತ್ಯಕ್ಷಿಕೆ**"** ಯನ್ನು ಕೈಗೊಂಡು ಜಕ್ಕಲ್‌ದಿನ್ನಿ ಗ್ರಾಮದ ರೈತರಿಗೆ ಮಾಹಿತಿಯನ್ನು ಒದಗಿಸಲಾಗಿದೆ. • ಶ್ರೀ ಬೆಟ್ಟದ ಬಸವೇಶ್ವರ, ರೈತ ಉತ್ಪಾದಕ ಸಂಘದ ಉತ್ಪನ್ನಗಳಿಗೆ ಮಾರುಕಟ್ಟೆ ಸಂಪರ್ಕವನ್ನು ಒದಗಿಸಲಾಗಿದೆ. • 2023–24ನೇ ಸಾಲಿನಲ್ಲಿ **"**ಮೆಣಸಿನಕಾಯಿ ಬೆಳೆಯಲ್ಲಿ ಅರ್ಕಾ ಮೈಕ್ರೋಬಿಯಲ್ ಕನ್ಸಾರ್ಷಿಯದ ಬಳಕೆಯ ಪ್ರಾತ್ಯಕ್ಷಿಕೆ**"** ಯನ್ನು ಸುಲ್ತಾನಪುರದಲ್ಲಿ ಕೈಗೊಳ್ಳಲಾಗಿದೆ. • ದಿನಾಂಕ 21.10.2024 ರಂದು ಹೊರ ಅವರಣ ತರಬೇತಿಯಲ್ಲಿ ತಂತ್ರಜ್ಞಾನ, ಸಂಸ್ಕರಣೆ, ಮೌಲ್ಯವರ್ಧನೆ ಕುರಿತು ಮಾಹಿತಿ ಜೊತೆಗೆ ಕೋಲ್ಡ ಸ್ಟೊರೇಜ್ ಸಂಪರ್ಕವನ್ನು ಒದಗಿಸಲಾಗಿದೆ. • 2024–25 ನೇ ಸಾಲಿನಲ್ಲಿ **"**ಮೆಣಸಿನಕಾಯಿ ಬೆಳೆಯಲ್ಲಿ ಸಮಗ್ರ ಕೀಟ ಹಾಗೂ ರೋಗ (ಸೊರಗು ರೋಗ) ನಿರ್ವಹಣೆ**"** ಪ್ರಾತ್ಯಕ್ಷಿಕೆ ಯನ್ನು ನಾಗಡದಿನ್ನಿ ಗ್ರಾಮದಲ್ಲಿ ಕೈಗೊಳ್ಳಲಾಗಿದೆ. • ಒಂದು ಜಿಲ್ಲೆ ಒಂದು ಉತ್ಪನ್ನ ಬೆಳೆಯಾದ ಮೆಣಸಿನಕಾಯಿಯಲ್ಲಿ ಕ್ಷೇತ್ರ ಪ್ರಾತ್ಯಕ್ಷಿಕೆ–10, ಕ್ಷೇತ್ರ ಭೇಟಿ–21, ತರಬೇತಿಗಳು–2 ಮತ್ತು ಕ್ಷೇತ್ರೋತ್ಸವ–1
6.		ರಾಯಚೂರು ಜಿಲ್ಲೆಯ ರೈತರಿಗೆ ಗೋಡಂಬಿ ಬೆಳೆಯನ್ನು ಪರಿಚಯಿಸಲು ಗೋಡಂಬಿ ಬೆಳೆಗೆ ಸಂಬಂಧಿಸಿದ ವೈಜ್ಞಾನಿಕ ತಾಂತ್ರಿಕತೆಗಳ ಕ್ರಿಯಾ ಯೋಜನೆಯಲ್ಲಿ ಮುಂಚೂಣಿ ಪ್ರಾತ್ಯಕ್ಷಿಕೆಯನ್ನು ತೆಗೆದುಕೊಳ್ಳಬೇಕು. **(ಕ್ರಮ: ವಿಜ್ಞಾನಿ (ತೋಟಗಾರಿಕೆ))**	• ಸುಮಾರು 50 ಹೆ. ಪ್ರದೇಶದಲ್ಲಿ ಗೋಡಂಬಿ (ವಿ–4 ಮತ್ತು ವಿ–9) ಸಂಕರಣ ತಳಿಗಳನ್ನು **"**ಕರ್ನಾಟಕದ ಈಶಾನ್ಯ ಒಣ ವಲಯದಲ್ಲಿ ಗೋಡಂಬಿ ಬೆಳೆಯ ಮುಂಚೂಣಿ ತಂತ್ರಜ್ಞಾನ ಪ್ರಾತ್ಯಕ್ಷಿಕೆ**"**ಯನ್ನು ಬಾಹ್ಯ ಧನಸಹಾಯ ಯೋಜನೆಯಡಿಯಲ್ಲಿ ಪ್ರಾತ್ಯಕ್ಷಿಕೆ ಕೈಗೊಳ್ಳಲಾಗಿದೆ.
7.		ಮುಂಗಾರು ಹಂಗಾಮು ಪ್ರಾರಂಭದಲ್ಲಿ ಹತ್ತಿ ತಳಿವರ್ಧಕರ ಜೊತೆಗೂಡಿ ಬಿ.ಟಿ. ಹತ್ತಿ ಬಗ್ಗೆ ರೈತರಿಗೆ ಒಂದು ಜಾಗೃತಿ ಕಾರ್ಯಕ್ರಮವನ್ನು ಕೈಗೊಳ್ಳಬೇಕು.	• ಸಿರವಾರದಲ್ಲಿ ಹತ್ತಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ ಕುರಿತು ಪ್ರಾತ್ಯಕ್ಷಿಕೆ, ತರಬೇತಿ, ಪದ್ಧತಿ ಪ್ರಾತ್ಯಕ್ಷಿಕೆ ಹಾಗೂ ಕ್ಷೇತ್ರ ಭೇಟಿಗಳನ್ನು ಕೈಗೊಳ್ಳಲಾಗಿದೆ. • ಹತ್ತಿ ತಳಿವರ್ಧಕರ ಜೊತೆಗೂಡಿ ಸಾಂದ್ರ ಪದ್ಧತಿ ಬಿ.ಟಿ. ಹತ್ತಿ ಬೆಳೆಯ ಕುರಿತು ಪುರತಿಪ್ಲಿ ಗ್ರಾಮದಲ್ಲಿ ವಿಚಾರ ಸಂಕಿರಣ/ ಜಾಗೃತಿ ಕಾರ್ಯಕ್ರಮವನ್ನು ದಿನಾಂಕ: 17.07.2024

ಕಾರ್ಯಸೂಚಿ ಸಂಖ್ಯೆ –03 ಹಿಂದಿನ ವೈಜ್ಞಾನಿಕ ಸಲಹಾ ಸಮಿತಿ ಸಭೆಯಲ್ಲಿ ನೀಡಿರುವ ಸಲಹೆಗಳಿಗೆ ತೆಗೆದುಕೊಂಡ ಕ್ರಮಗಳು			
ಕ್ರಮ	**ಶಿಫಾರಸ್ಸು**	**ಸಲಹೆಗಳು**	**ಕ್ರಮಗಳು**
		(ಕ್ರಮ: ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು)	ರಂದು ಹಮ್ಮಿಕೊಳ್ಳಲಾಗಿದೆ. ಸುಮಾರು 250 ಹತ್ತಿ ಬೆಳೆಯುವ ರೈತರು ಪಾಲ್ಗೊಂಡು, ತಂತ್ರಜ್ಞಾನದ ಲಾಭ ಪಡೆದುಕೊಂಡರು. • ದಿನಾಂಕ: 07.11.2024 ರಂದು ಕುರ್ಡಿ ಗ್ರಾಮದಲ್ಲಿ ಕ್ಷೇತ್ರೋತ್ಸವ / ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ. • ಹತ್ತಿ ತಳಿವರ್ಧಕರ ಜೊತೆಗೂಡಿ ಸಾಂದ್ರ ಪದ್ಧತಿ ಬಿ.ಟಿ. ಹತ್ತಿ ಬೆಳೆಯ ಕುರಿತು ಕೃಷಿ ವಿಸ್ತರಣಾ ಕೇಂದ್ರ, ದೇವದುರ್ಗದಲ್ಲಿ ದಿನಾಂಕ: 31.07.2024 ಹತ್ತಿ ಬೆಳೆಯ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. • ದಿನಾಂಕ: 4.12.2024 ರಂದು ಹತ್ತಿ ಬೆಳೆಯ ಕುರಿತು ಒಂದು ದಿನದ ಕಾರ್ಯಗಾರವನ್ನು ರೈತ ಸಂಘದ ಸದಸ್ಯರು ಮತ್ತು ಜಿಲ್ಲೆಯ ರೈತರೊಂದಿಗೆ ಕಾರ್ಯಕ್ರಮವನ್ನು ಕೈಗೊಳ್ಳಲಾಯಿತು.
8.		ಮಣ್ಣು ಮತ್ತು ನೀರು ಪರೀಕ್ಷೆ ಪ್ರಯೋಗಾಲಯದಲ್ಲಿ working condition ಸರಿಪಡಿಸಿಕೊಳ್ಳುವುದು. **(ಕ್ರಮ: ಮಣ್ಣು ವಿಜ್ಞಾನಿ)**	• ಕೃಷಿ ಮಹಾವಿದ್ಯಾಲಯದಿಂದ ಮಣ್ಣು ವಿಜ್ಞಾನಿಗಳನ್ನು ಕರೆಸಿ ಪ್ರಯೋಗಾಲಾಯದಲ್ಲಿರುವ ಉಪಕರಣಗಳ ಸ್ಥಿತಿಯನ್ನು ನಮೂದಿಸಿಕೊಳ್ಳಲಾಗಿದೆ. • ಅಂತೆಯೇ ಮಣ್ಣು ವಿಜ್ಞಾನ ಪ್ರಯೋಗಾಲಯದ ಓಂಃಐ ಖಿಜಛಿಠರಟಿಣಿಐಠಟಿ ಗಾಗಿ, ಮಣ್ಣು ವಿಜ್ಞಾನಿಗಳ ಅವಶ್ಯಕತೆ ಇರುವುದರಿಂದ, ಸದರಿ ವಿಜ್ಞಾನಿಗಳನ್ನು ನಿಯೋಜಿಸಲು ಕೋರಲಾಗಿದೆ. (ದಿನಾಂಕ 09.08.2024 ರ ಸಭೆಯ ನಡಾವಳಿಗಳ ಪ್ರಕಾರ ತಿರ್ಮಾನಿಸಲಾಗಿದೆ. ಅದರಂತೆ ದಿನಾಂಕ 25.09.2024 ರಂದು ಪತ್ರ ಮುಖಾಂತರ ಕೋರಿಕೆ ಸಲ್ಲಿಸಲಾಗಿದೆ.).
9.		ವಿಜ್ಞಾನಿಗಳು ಕೈಗೊಳ್ಳುವ ಮುಂಚೂಣಿ ಪ್ರಾತ್ಯಕ್ಷಿಕೆಗಳಲ್ಲಿ ವಿಸ್ತರಣಾ ಚಟುವಟಿಕೆಗಳ ಬಗ್ಗೆ ನಮೂದಿಸಬೇಕು. ಮುಂಚೂಣಿ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳುವ ಮುಂಚೆ, ಕೈಗೊಂಡಾಗ ಹಾಗೂ ನಂತರ ರೈತರ ತಾಕುಗಳಿಗೆ ಕ್ಷೇತ್ರ ಭೇಟಿ ಕೈಗೊಳ್ಳಬೇಕು. **(ಕ್ರಮ: ಎಲ್ಲಾ ವಿಜ್ಞಾನಿಗಳು)**	• ಆಹಾರ ಭದ್ರತಾ ಯೋಜನೆಯಡಿಯಲ್ಲಿ ತೊಗರಿ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆಯ ಪ್ರಾತ್ಯಕ್ಷಕೆ (ಹೊರ ಅವರಣ ತರಬೇತಿ, ದಿನಾಂಕ: 31.05.2024 • ತೊಗರಿ ಬೆಳೆಯ ಕುರಿತು ಹೊರ ಅವರಣ ತರಬೇತಿ ದಿನಾಂಕ: 05.06.2024 • ಹೀರುಂಡಿ ಗ್ರಾಮದಲ್ಲಿ ಹೊರ ಅವರಣ ತರಬೇತಿ ದಿನಾಂಕ: 07.06.2024 • ಹತ್ತಿ ಬೆಳೆಯಲ್ಲಿ ಅಧಿಕ ಸಾಂದ್ರ ಪದ್ಧತಿಯ ತರಬೇತಿಯನ್ನು ಪುರತಿಪ್ಲಿ ಗ್ರಾಮದಲ್ಲಿ ದಿನಾಂಕ 17.07.2024 • ಸಾಂದ್ರ ಪದ್ಧತಿ ಬಿ.ಟಿ. ಹತ್ತಿ ಬೆಳೆಯ ಕುರಿತು ಕೃಷಿ ವಿಸ್ತರಣಾ ಕೇಂದ್ರ, ದೇವದುರ್ಗದಲ್ಲಿ ದಿನಾಂಕ: 31.07.2024 ಹತ್ತಿ ಬೆಳೆಯ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಕಾರ್ಯಸೂಚಿ ಸಂಖ್ಯೆ –03 ಹಿಂದಿನ ವೈಜ್ಞಾನಿಕ ಸಲಹಾ ಸಮಿತಿ ಸಭೆಯಲ್ಲಿ ನೀಡಿರುವ ಸಲಹೆಗಳಿಗೆ ತೆಗೆದುಕೊಂಡ ಕ್ರಮಗಳು			
ಕ್ರಮ	**ಶಿಫಾರಸ್ಸು**	**ಸಲಹೆಗಳು**	**ಕ್ರಮಗಳು**
			• ದಿನಾಂಕ: 09.11.2024 ರಂದು ಕಾಟನ್ ಶ್ರೇಡ್ಡರ್ ಪ್ರಾತ್ಯಕ್ಷಿಕೆಯನ್ನು ಸಿರವಾರದಲ್ಲಿ ಕೈಗೊಳ್ಳಲಾಯಿತು. • ದಿನಾಂಕ 27.11.2024 ರಂದು ಹತ್ತಿ ಬೆಳೆಯ ಕ್ಷೇತ್ರೋತ್ಸವ ಹಾಗೂ ಕಿಸಾನ್ ಮೇಳವನ್ನು ಆಯೋಜಿಸಲಾಗಿತ್ತು. • ಸಮಗ್ರ ಹತ್ತಿ ಬೆಳೆ ನಿರ್ವಹಣೆ ಕುರಿತು ದಿನಾಂಕ: 04.12.2024 ಕಾರ್ಯಗಾರವನ್ನು ಆಯೋಜಿಸಲಾಗಿತ್ತು. • 2024–25ರ ಸಾಲಿನಲ್ಲಿ ಮುಂಚೂಣಿ ಪ್ರಾತ್ಯಕ್ಷಿಕೆ, ಸಾಮಸ್ಯಾತ್ಮಕ ತಾಕುಗಳಿಗೆ ಭೇಟಿ ಹಾಗೂ ಇಲಾಖೆಗಳೊಂದಿಗೆ ಸುಮಾರು 140–165 ಕ್ಷೇತ್ರ ಭೇಟಿಗಳನ್ನು ಕೈಗೊಳ್ಳಲಾಗಿದೆ. • ಈಗಾಗಲೇ ಕೈಗೊಂಡಿರುವ ಮುಂಚೂಣಿ ಪ್ರಾತ್ಯಕ್ಷಿಕೆಗಳ ಜೊತೆಗೆ ವಿವಿಧ ಬೆಳೆಗಳ ಸಾಮಸ್ಯತ್ಮಾಕ ಸಂದರ್ಭಗಳಲ್ಲಿ ಕ್ಷೇತ್ರ ಭೇಟಿ ನೀಡಿ ಸಲಹೆ ಹಾಗೂ ಸೂಕ್ತ ಮಾರ್ಗದರ್ಶನ ಮಾಡಲಾಗಿದೆ.
10.		ಕಡಲೆ ತಳಿಗಳ ಕುರಿತಂತೆ ಮುಂಚೂಣಿ ಪ್ರಾತ್ಯಕ್ಷಿಕೆಯನ್ನು ಕೈಗೊಳ್ಳುವುದು **(ಕ್ರಮ: ವಿಜ್ಞಾನಿ (ಬೇಸಾಯಶಾಸ್ತ್ರ))**	• 2023–24 ಸಾಲಿನಲ್ಲಿ ಕಡೆಲೆ ತಳಿ ಬಿ.ಜಿ.ಡಿ.–103ಯ 2023–24 ಸಾಲಿನ ಎನ್.ಎಫ್.ಎಸ್.ಎಂ. ಆಹಾರ ಭದ್ರತಾ ಯೋಜನೆಡಿಯಲ್ಲಿ ಗುಚ್ಚ ಪ್ರಾತ್ಯಕ್ಷಿಕೆಗಳನ್ನು ಮಾನವಿ ಮತ್ತು ಸಿರವಾರ ತಾಲೂಕಿನ ಗ್ರಾಮಗಳಲ್ಲಿ ಕೈಗೊಳ್ಳಲಾಗಿದೆ. • ಕಡೆಲೆ ತಳಿ ಬಿ.ಜಿ.ಡಿ.–103 ಜೊತೆಗೆ ಪೂಲೆ ವಿಶ್ವರಾಜ ತಳಿಯನ್ನು ಕ್ಷೇತ್ರ ಪ್ರಯೋಗವಾಗಿ ಜಕ್ಕಲದಿನ್ನಿ ಗ್ರಾಮದ 2 ರೈತರ ತಾಕುಗಳಲ್ಲಿ 2024–25 ನೇ ಸಾಲಿನಲ್ಲಿ ಕೈಗೊಳ್ಳಲಾಗಿದೆ.
11.		ರೈತರಿಗೆ ಸಾವಯವ ಕೃಷಿಯನ್ನು ಕೈಗೊಳ್ಳಲು ಪ್ರೇರೆಪಿಸುವುದು. **(ಕ್ರಮ: ಎಲ್ಲಾ ವಿಜ್ಞಾನಿಗಳು)**	• ಇಲಾಖೆಗಳ ಸಹಯೋಗದಲ್ಲಿ ಕೃಷಿ ಸಖಿ, ಪಶು ಸಖಿ ಹಾಗೂ ಸ್ವಚ್ಛತಾ ಸಖಿಯರಿಗೆ 5 ದಿನಗಳವರೆಗೆ ಎರಡು ಕಾರ್ಯಗಾರಗಳನ್ನು ಕೈಗೊಂಡು ಸಾವಯವ ಕೃಷಿಯ ಸಂಪೂರ್ಣ ತರಬೇತಿ ನೀಡಲಾಗಿದೆ. (ದಿನಾಂಕ: 12.03.2024 ರಿಂದ 16.03.2024, 18.03.2024 ರಿಂದ 23.03.2024) • ಪಶು ಸಂಗೋಪನಾ ಇಲಾಖೆ ಜೊತೆಗೂಡಿ ದಿನಾಂಕ: 21.09.2024 ರಿಂದ 11.10.2024 ರವರೆಗೆ 21 ದಿನಗಳವರೆಗೆ ತರಬೇತಿ ಕಾರ್ಯಗಾರದಲ್ಲಿ ಸುಮಾರು 73 ಮೈತ್ರಿ ಕಾರ್ಯಕರ್ತರಿಗೆ ಕೃತಕ ಗರ್ಭದಾರಣೆ ಜೊತೆಗೆ ಸಾವಯವ ಕೃಷಿ ಮತ್ತು ಸಹಜ ಕೃಷಿಯ ಕುರಿತು ತರಬೇತಿಯನ್ನು ಕೈಗೊಳ್ಳಲಾಗಿದೆ. • ದಿನಾಂಕ: 05.12.2024ರ ವಿಶ್ವ ಮಣ್ಣು ದಿನಾಚರಣೆ ಅಂಗವಾಗಿ ಸಾವಯವ ಕೃಷಿ ಕುರಿತು ವಿಶೇಷ ಉಪಾನ್ಯಸವನ್ನು ರೈತಬಾಂಧವರಿಗೆ ನೀಡಲಾಗಿದೆ.

ಕಾರ್ಯಸೂಚಿ ಸಂಖ್ಯೆ –03 ಹಿಂದಿನ ವೈಜ್ಞಾನಿಕ ಸಲಹಾ ಸಮಿತಿ ಸಭೆಯಲ್ಲಿ ನೀಡಿರುವ ಸಲಹೆಗಳಿಗೆ ತೆಗೆದುಕೊಂಡ ಕ್ರಮಗಳು			
ಕ್ರಮ	**ಶಿಫಾರಸ್ಸು**	**ಸಲಹೆಗಳು**	**ಕ್ರಮಗಳು**
12.		ವಿಜ್ಞಾನಿಗಳು ಮುಂಚೂಣಿ ಪ್ರಾತ್ಯಕ್ಷಿಕೆ ಕೈಗೊಂಡಾಗ ಬೋರ್ಡ್‌ನಲ್ಲಿ ತಳಿಗಳ ವಿವರವನ್ನು ಕಡ್ಡಾಯವಾಗಿ ನಮೂದಿಸಬೇಕು. **(ಕ್ರಮ: ಎಲ್ಲಾ ವಿಜ್ಞಾನಿಗಳು)**	• ಮುಂಚೂಣಿ ಪ್ರಾತ್ಯಕ್ಷಿಕೆ ಕೈಗೊಂಡ ತಾಕುಗಳಿಗೆ ಬೋರ್ಡ್‌ಗಳನ್ನು ಅಳವಡಿಸಿ ತಳಿಗಳ ವಿವರ, ಬಿತ್ತನೆ ದಿನಾಂಕ, ಇತರೆ ತಾಂತ್ರಿಕತೆಗಳ ಕುರಿತು ವಿವರಣೆಗಳನ್ನು ಪ್ರದರ್ಶಿಸಲಾಗಿದೆ.
13.		ರೈತರು ಅತಿಯಾದ ರಾಸಾಯನಿಕ ಗೊಬ್ಬರ ಹಾಗೂ ಔಷಧಿಗಳ ಬಳಕೆಯ ಪ್ರಮಾಣವನ್ನು ಕಡಿಮೆ ಮಾಡಲು ಜಾಗೃತಿ ತರಬೇತಿ ಕಾರ್ಯಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು. **(ಕ್ರಮ: ಎಲ್ಲಾ ವಿಜ್ಞಾನಿಗಳು)**	• ಪೀಡೆ ನಾಶಕಗಳ ಸುರಕ್ಷಿತ ಬಳಕೆಯ ಕುರಿತು ತರಬೇತೆಯನ್ನು ದಿನಾಂಕ: 20.10.2024 ದೇವದುರ್ಗ ಲಾಲ್ಲೂಕಿನ ಮಸೀದಿಪುರ ಗ್ರಾಮದಲ್ಲಿ ಕೃಷಿ ಇಲಾಖೆ, ದೇವದುರ್ಗ ಹಾಗೂ ಕೃಷಿ ವಿಸ್ತರಣಾ ಕೇಂದ್ರ, ದೇವದುರ್ಗದ ಸಹಯೋಗದಲ್ಲಿ ಕೈಗೊಳ್ಳಲಾಗಿದೆ. • ಪೀಡೆ ನಾಶಕಗಳ ಸುರಕ್ಷಿತ ಬಳಕೆಯ ಕುರಿತು ತರಬೇತೆಯನ್ನು ದಿನಾಂಕ: 07.11.2024 ರಂದು ಕುರ್ಡಿ ಗ್ರಾಮದಲ್ಲಿ ಕೈಗೊಳ್ಳಲಾಗಿದೆ. • ಇತರೆ ತರಬೇತಿ ಕಾರ್ಯಕ್ರಮ, ಕ್ಷೇತ್ರ ಭೇಟಿ ಹಾಗೂ ಕ್ಷೇತ್ರೋತ್ಸವ ಹಮ್ಮಿಕೊಂಡ ಸಂಧರ್ಬದಲ್ಲಿ ಪೀಡೆ ನಾಶಕಗಳ ಸುರಕ್ಷಿತ ಬಳಕೆಯ ಕುರಿತು ಮಾಹಿತಿಯನ್ನು ರೈತರಿಗೆ ತಿಳಿಸಿಕೊಡಲಾಗಿದೆ. • ದಿನಾಂಕ 05–12–2024 ರಂದು ವಿಶ್ವ ಮಣ್ಣು ದಿನಾಚರಣೆಯಂದು ರಾಸಾಯನಿಕ್ ಗೊಬ್ಬರ ಬಳಕೆಯನ್ನು ಕಡಿಮೆಗೊಳಿಸಿ ಸಾವಯವ ಗೊಬ್ಬರ ಬಳಕೆಂದು ಜಾಗೃತಿ ಮೂಡಿಸಲಾಗಿದೆ.
14.		ಭತ್ತದ ಪರ್ಯಾಯ ಬೆಳೆಗಳ ಬಗ್ಗೆ ರೈತರಿಗೆ ಮಾಹಿತಿ ನೀಡುವುದು. **(ಕ್ರಮ: ವಿಜ್ಞಾನಿ (ಬೇಸಾಯಶಾಸ್ತ್ರ))**	• 2024–25 ನೇ ಸಾಲಿನ ಬೇಸಿಗೆ ಹಂಗಾಮಿನಲ್ಲಿ ಆಹಾರ ಭದ್ರತಾಯಡಿಯಲ್ಲಿ ಗುಚ್ಚ ಪ್ರಾತ್ಯಕ್ಷಿಕೆಯಾಗಿ ಸಾಸಿವೆ ಬೆಳೆಯನ್ನು ಭತ್ತದ ಕಟಾವಿನ ನಂತರ ಪರ್ಯಾಯ ಬೆಳೆಯಾಗಿ ಬೆಳೆಯಲು ಪ್ರಾತ್ಯಕ್ಷಿಕೆಯನ್ನು ಸುಮಾರು 25 ಎಕರೆ ಪ್ರದೇಶದಲ್ಲಿ ಕೈಗೊಳ್ಳಲಾಗುವುದು. • ದಿನಾಂಕ: 07.06.2024 ರಂದು ದೇವದುರ್ಗ ತಾಲ್ಲೂಕಿನ ವಿಸ್ತರಣಾ ಶಿಕ್ಷಣ ಕೇಂದ್ರ, ದೇವದುರ್ಗ ಇವರ ಸಹಯೋಗದಲ್ಲಿ ಪರ್ಯಾಯ ಬೆಳೆ ಕುರಿತು ತರಬೇತಿಯನ್ನು ಕೈಗೊಳ್ಳಲಾಗಿದೆ. • 2024–25 ಸಾಲಿನಲ್ಲಿ ರಾಯಚೂರು ತಾಲೂಕಿನ ಶ್ರೀರಾಮನಗರ ಕ್ಯಾಂಪ್‌ನಲ್ಲಿ ಭತ್ತದ ಬೆಳೆಯುವ ತಾಕುಗಳಲ್ಲಿ ಭತ್ತಕ್ಕೆ ಪರ್ಯಾಯ ಬೆಳೆಯಾಗಿ ಸೋಯಾ ಅವರೆ (ತಳಿ: ಡಿಎಸ್ಬಿ–3) ಯನ್ನು ಮುಂಚೂಣಿ ಪ್ರಾತ್ಯಕ್ಷಿಕೆಯಾಗಿ ಕೈಗೊಳ್ಳಲಾಗಿದೆ.

ಕಾರ್ಯಸೂಚಿ ಸಂಖ್ಯೆ –03 ಹಿಂದಿನ ವೈಜ್ಞಾನಿಕ ಸಲಹಾ ಸಮಿತಿ ಸಭೆಯಲ್ಲಿ ನೀಡಿರುವ ಸಲಹೆಗಳಿಗೆ ತೆಗೆದುಕೊಂಡ ಕ್ರಮಗಳು			
ಕ್ರಮ	**ಶಿಫಾರಸ್ಸು**	**ಸಲಹೆಗಳು**	**ಕ್ರಮಗಳು**
			• ದಿನಾಂಕ: 15.09.2024 ರಂದು ಸಿರವಾರದಲ್ಲಿ ತೋಟಗಾರಿಕೆ ಇಲಾಖೆಯ ಸಹಯೋಗದೊಂದಿಗೆ ಭತ್ತಕ್ಕೆ ಆಯಿಲ್ ಪಾಮ್ ಬೆಳೆ ಕುರಿತು ರೈತರಿಗೆ ತರಬೇತಿ ನೀಡಲಾಗಿದೆ.
15.		ರೈತರಿಗೆ ಸಿರಿಧಾನ್ಯಗಳ ಕೋಯ್ಲೋತ್ತರ ತಂತ್ರಜ್ಞಾನಗಳ ಯಂತ್ರಗಳನ್ನು ಪರಿಚಯ ಹಾಗೂ ಬಳಕೆ ಮಾಡುವುದನ್ನು ತಿಳಿಸಬೇಕು. **(ಕ್ರಮ: ವಿಜ್ಞಾನಿ (ಗೃಹ ವಿಜ್ಞಾನ))**	• ದಿನಾಂಕ 08.10.2024 ರಂದು ರೈತರು ಮತ್ತು ರೈತ ಕೃಷಿ ಮಹಿಳೆಯರಿಗೆ ಸಿರಿಧಾನ್ಯಗಳ ಕೋಯ್ಲೊತ್ತರ ತಂತ್ರಜ್ಞಾನ, ಸಂಸ್ಕರಣೆ ಮತ್ತು ಮೌಲ್ಯವರ್ಧನೆ ಕುರಿತು ತರಬೇತಿ ಕೈಗೊಳ್ಳಲಾಗಿದೆ. • ವಿಶ್ವವಿದ್ಯಾಲಯದ ಸಂಸ್ಕರಣಾ ಘಟಕಕ್ಕೆ ಭೇಟಿ ನೀಡಿ ಅಲ್ಲಿ ಕೈಗೊಳ್ಳಲಾಗುವ ಪ್ರತಿಯೊಂದು ಯಂತ್ರದ ಕಾರ್ಯನಿರ್ವಹಣೆ ಪ್ರಾತ್ಯಕ್ಷಿಕೆಯನ್ನು ತೋರಿಸಲಾಯಿತು. ಸುಮಾರು 40 ಜನ ರೈತರು & ರೈತ ಮಹಿಳೆಯರು ಪಾಲ್ಗೊಂಡಿದ್ದರು. • ಕೃಷಿ ವಿಜ್ಞಾನ ಕೇಂದ್ರದ ಮಾರ್ಗದರ್ಶನದಲ್ಲಿ ಸ್ಥಾಪಿತಗೊಂಡ ಶ್ರೀ. ಬೆಟ್ಟದಬಸವೆಸ್ವರ ರೈತ ಉತ್ಪಾದಕರ ಸಂಘ, ಜಕ್ಕಲದಿನ್ನಿಯಲ್ಲಿ ಸಿರಿದಾನ್ಯಗಳ ಸಂಸ್ಕರಣಾ ಘಟಕವು ಸುಮಾರು 70ಕ್ವಿ. ರಷ್ಟು ಕಿಸನ್ ಸಮೃದ್ಧಿ ಬ್ರಾಂಡ್‌ನೊಂದಿಗೆ ಮಾರಾಟವಾಗಿದೆ. (ಸಜ್ಜೆ, ನವಣೆ, ಹಾರಕ, ಕೊರಲೆ, ಸಾಮೆ ಮತ್ತು ಊದಲು)
16.		ವಿವಿಧ ವಿಶ್ವವಿದ್ಯಾಲಯಗಳಲ್ಲಿ ಹಾಗೂ ವಿವಿಧ ಇಲಾಖೆಗಳಲ್ಲಿ ನಡೆಯುವ ಕೃಷಿ ಮೇಳ, ಕೃಷಿಗೆ ಸಂಬಂಧಿಸಿದ ಸಮಾವೇಶಗಳ ಬಗ್ಗೆ ಮಾಹಿತಿ ಸಂದೇಶದ ಮುಖಾಂತರ ನೀಡಬೇಕು. ಮುಂದುವರೆದು, ಸಾಧ್ಯವಾದರೆ ಆಯ್ದ ರೈತರನ್ನು ಸದರಿ ಕಾರ್ಯಕ್ರಮಗಳಿಗೆ ಕಛೇರಿಯ ಮುಖಾಂತರ ವೀಕ್ಷಣೆಗೆ ಕರೆದುಕೊಂಡು ಹೋಗುವುದು ಸೂಕ್ತ ಎಂದು ತಿಳಿಸಿದರು. **(ಕ್ರಮ: ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು)**	• ಕೃಷಿ ಮೇಳ ಆಯೋಜನೆಗೆ ಸಂಬಧಿಸಿದ ಬಿತ್ತಿ ಪತ್ರಗಳು, ಪೋಸ್ಟರ್‌ಗಳು ಮತ್ತು ಆಹ್ವಾನ ಪತ್ರಿಕೆಗಳನ್ನು ರೈತ ಬಾಂಧವರಿಗೆ ನೀಡಲಾಗಿದೆ. ಹಾಗೂ ಗ್ರಾಮ ಪಂಚಾಯತಿ ಮಟ್ಟದಲ್ಲಿ ಪ್ರದರ್ಶಿಸಲಾಗಿದೆ. • ಕೃಷಿ ಮೇಳಗಳ ಕುರಿತ ಪತ್ರಿಕೆ ಪ್ರಕಟಣೆಗಳ ಮುಖಾಂತರ ಪ್ರಚಾರ ಮಾಡಲಾಗಿದೆ. • ಕೆವಿಕೆ ವತಿಯಿಂದ ರಚನೆಯಾದ ಸುಮಾರು 34 ರೈತರ ವಾಟ್ಸಪ್ ಗ್ರೂಪ್‌ಗಳ ಮುಖಾಂತರ ಸಂದೇಶಗಳನ್ನು ರವಾನಿಸಲಾಗಿದೆ. • ದಿನಾಂಕ 07, 08 & 09–12–2024 ರಂದು ಜರುಗಿದ ಕೃಷಿ ಮೇಳಕ್ಕೆ ಜಿಲ್ಲೆಯ ಎಲ್ಲಾ ತಾಲೂಕಗಳ ಗ್ರಾಮಗಳಿಂದ ಮೂರು ದಿನಗಳೂ ಸಹ ರೈತರನ್ನು ಕರೆಯಿಸಲಾಗಿದೆ. • ಕೃಷಿ ಮೇಳದಲ್ಲಿ ಎಲ್ಲಾ ಮಳಿಗೆಳಿಗೆ ರೈತರನ್ನು ಭೇಟಿ ಮಾಡಿಸಿ ಮಾಹಿತಿ ಕೊಡಿಸಲಾಗಿದೆ, ರೈತರಿಂದ ರೈತರಿಗೆ ಕಾರ್ಯಕ್ರಮದಲ್ಲಿ ಮಾಹಿತಿ ಪಡೆದುಕೊಂಡಿದ್ದಾರೆ ಹಾಗೂ ವಿಜ್ಞಾನಿಗಳ ಸಲಹಾ ಕೇಂದ್ರದಿಂದ ರೈತರಿಗೆ ಕೃಷಿ ಸಂಬಂಧಿಸಿದ ವಿವಿಧ ಸಮಸ್ಯಗಳಿಗೆ ಸಲಹೆ ಕೊಡಿಸಲಾಗಿದೆ. • ಅಲ್ಲದೆ, ಕೃಷಿ ಮೇಳ ಧಾರವಾಡಕ್ಕೆ ಸಹ ರೈತರನ್ನು ಕಳುಹಿಸಲಾಗಿದೆ.

ಕಾರ್ಯಸೂಚಿ ಸಂಖ್ಯೆ –03 ಹಿಂದಿನ ವೈಜ್ಞಾನಿಕ ಸಲಹಾ ಸಮಿತಿ ಸಭೆಯಲ್ಲಿ ನೀಡಿರುವ ಸಲಹೆಗಳಿಗೆ ತೆಗೆದುಕೊಂಡ ಕ್ರಮಗಳು			
ಕ್ರಮ	**ಶಿಫಾರಸ್ಸು**	**ಸಲಹೆಗಳು**	**ಕ್ರಮಗಳು**
17.		ಪ್ರತಿ ತರಬೇತಿಯಲ್ಲಿ ಇಲಾಖೆಯವರನ್ನು ಸಂಪನ್ಮೂಲ ವ್ಯಕ್ತಿಯಾಗಿ ಕರೆಸಿ ಇಲಾಖೆಯ ಯೋಜನೆಗಳ ಬಗ್ಗೆ ರೈತರಿಗೆ ಮಾಹಿತಿ ನೀಡಬೇಕು ಎಂದು ಹೇಳಿದರು. **(ಕ್ರಮ: ಎಲ್ಲಾ ವಿಜ್ಞಾನಿಗಳು)**	• ಕೃಷಿ ವಿಜ್ಞಾನ ಕೇಂದ್ರ ವತಿಯಿಂದ ಹಮ್ಮಿಕೊಳ್ಳಲಾಗುವ ವಿವಿಧ ತರಬೇತಿ, ಕಾರ್ಯಗಾರ ಹಾಗೂ ಕ್ಷೇತ್ರೋತ್ಸವಗಳಲ್ಲಿ ಇಲಾಖೆಯ ಅಧಿಕಾರಿಗಳನ್ನು ಕರೆಯಿಸಿ ಮಾಹಿತಿ ಒದಗಿಸಲಾಗಿದೆ.
18.		ಕ್ಯೂ.ಆರ್. ಕೋಡ್ ಆಧಾರಿತ ತಂತ್ರಜ್ಞಾನಗಳನ್ನು ಅನುಷ್ಠಾನ ಕಾರ್ಯಕ್ರಮಗಳನ್ನು ಕೈಗೊಳ್ಳುವುದು. **(ಕ್ರಮ: ತಾಂತ್ರಿಕ ಅಧಿಕಾರಿಗಳು)**	• ಕೃಷಿ ವಿಜ್ಞಾನ ಕೇಂದ್ರ ವತಿಯಿಂದ 2023–24 ಸಾಲಿನಲ್ಲಿ ಸುಮಾರು 44 ಕೃಷಿ ಬೆಳೆಗಳ ತಾಂತ್ರಿಕತೆಗಳನ್ನು ಕ್ಯೂ.ಆರ್. ಕೋಡ್‌ಗಳಾಗಿ ಪರಿವರ್ತಿಸಿ 1000 ಹಸ್ತ ಪ್ರತಿಯಾಗಿ ಪ್ರಕಟಿಸಿ ರೈತರಿಗೆ ವಿತರಿಸಲಾಗಿದೆ. • ಕೃಷಿ ವಿಜ್ಞಾನ ಕೇಂದ್ರದ ಯೂಟ್ಯೂಬ್ ಚಾನಲ್‌ನಲ್ಲಿ ಲಭ್ಯವಿರುವ ಕೃಷಿ ತಾಂತ್ರಿಕತೆಗಳ ವಿಡಿಯೋಗಳನ್ನು ಕ್ಯೂ.ಆರ್. ಕೋಡ್‌ಗಳಾಗಿ ಪರಿವರ್ತಿಸಿ ಬಿಡುಗಡೆಗೊಳಿಸಲಾಗಿದೆ. • ಕೃಷಿಮೇಳ–2024 ರ ಉದ್ಘಾಟನಾ ಸಮಾರಂಭದಲ್ಲಿ ಎಲ್ಲಾ ವಿಡಿಯೋಗಳ ಕ್ಯೂ.ಆರ್. ಕೋಡ್‌ಗಳ ಹಸ್ತ ಪ್ರತಿಗಳನ್ನು ಬಿಡುಗಡೆಗೊಳಿಸಿಲಾಗಿದೆ.

ಕಾರ್ಯ ಸೂಚಿ ಸಂಖ್ಯೆ 4
ಪ್ರಗತಿಯ ವರದಿ ಹಾಗೂ ಮುಂದಿನ ಹಂಗಾಮಿಗೆ ಕ್ರಿಯಾಯೋಜನೆ

ಕೃಷಿ ವಿಜ್ಞಾನ ಕೇಂದ್ರ, ರಾಯಚೂರು: ಒಂದು ಕಿರು ನೋಟ

ಕೃಷಿಯಲ್ಲಿ ಹೊರಬಂದಿರುವ ಹೊಸ ಹೊಸ ಕೃಷಿ ತಂತ್ರಜ್ಞಾನಗಳನ್ನು ರೈತರಿಗೆ ವರ್ಗಾವಣೆ ಮಾಡುವುದು ಅತಿ ಮುಖ್ಯವಾದ ಕರ್ತವ್ಯವಾಗಿದೆ.ಸಂಶೋಧನಾ ಕೇಂದ್ರಗಳಲ್ಲಿ ಒದಗುವ ತಾಂತ್ರಿಕ ಜ್ಞಾನವನ್ನು ಸಾಮಾನ್ಯ ರೈತರಿಗೆ ತಲುಪಿಸಲು ಹಲವು ವರ್ಷಗಳೇ ಬೇಕಾಗುತ್ತದೆ.ಆದ್ದರಿಂದ ಈ ನ್ಯೂನ್ಯತೆಯನ್ನು ನಿವಾರಿಸಲು ಭಾರತೀಯ ಕೃಷಿ ಸಂಶೋಧನಾ ಪರಿಷತ್, ನವದೆಹಲಿ ಇವರ ನೇತೃತ್ವದಲ್ಲಿ ದೇಶದ ಪ್ರತಿ ಜಿಲ್ಲೆಗಳಲ್ಲಿ ಕೃಷಿ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸಲಾಯಿತು.ಈ ಆಯೋಗದ ವರದಿಗನುಗುಣವಾಗಿ 1994 ಡಿಸೆಂಬರ್‌ನಲ್ಲಿ ರಾಯಚೂರಿನ ಪ್ರಾದೇಶಿಕ ಸಂಶೋಧನಾ ಕೇಂದ್ರದ ಆವರಣದಲ್ಲಿ ಕೃಷಿ ವಿಶ್ವವಿದ್ಯಾಲಯ, ಧಾರವಾಡದ ಆಡಳಿತ ವ್ಯಾಪ್ತಿಗೆ ಒಳಪಟ್ಟು ಕೃಷಿ ವಿಜ್ಞಾನ ಕೇಂದ್ರವು ಪ್ರಾರಂಭಗೊಂಡಿತು ಹಾಗೂ ಏಪ್ರಿಲ್ 2009 ರಿಂದ ಕೃಷಿ ವಿಶ್ವವಿದ್ಯಾಲಯ, ರಾಯಚೂರಿನ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ವೈಜ್ಞಾನಿಕ ಕ್ಷೇತ್ರದಲ್ಲಾಗುವ ಬೆಳವಣಿಗೆಗಳು ವಿಸ್ತರಣೆಗೆ ಪ್ರಚೋದಕಗಳಾಗಿ ಕೆಲಸ ಮಾಡುತ್ತೇವೆ. ಆಧುನಿಕ ಕೃಷಿ ಬಗ್ಗೆ ರೈತರಿಗೆ ಸಮರ್ಪಕ ಮಾಹಿತಿಯನ್ನು ಒದಗಿಸಿಕೊಟ್ಟು ಅಧಿಕ ಉತ್ಪಾದನೆಯ ಜೊತೆಗೆ ಅಧಿಕ ಲಾಭವನ್ನು ಗಳಿಸುವಂತೆ ಕಾರ್ಯೋನ್ಮುಖರನ್ನಾಗಿ ಮಾಡುವಲ್ಲಿ ಕೃಷಿ ವಿಜ್ಞಾನ ಕೇಂದ್ರವು ಸಂಶೋಧನಾ ಫಲಿತಾಂಶಗಳು ಮತ್ತು ರೈತ ಸಮುದಾಯ ಇವೆರಡರ ಮಧ್ಯ ಒಂದು ಕೊಂಡಿಯಾಗೆ ಕೆಲಸ ನಿರ್ವಹಿಸುತ್ತಿದೆ. ಕೃಷಿ ವಿಜ್ಞಾನ ಕೇಂದ್ರವು ಮುಖ್ಯವಾಗಿ ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಗೃಹವಿಜ್ಞಾನ, ಸಸ್ಯ ರೋಗ ಮತ್ತು ಕೀಟ ನಿರ್ವಹಣೆ, ಕೃಷಿ ಸಂಬಂಧಿತ ಉಪಕರಣಗಳು, ಮಣ್ಣು ವಿಜ್ಞಾನ ಇವೆಲ್ಲವುಗಳಿಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯನ್ನು ನೀಡುವಲ್ಲಿ ರೈತರಿಗೆ ದಾರಿ ದೀಪವಾಗಿದೆ.ರೈತ ಹಾಗೂ ರೈತ ಮಹಿಳೆಯರಿಗೆ ಉಪಯುಕ್ತ ಮಾಹಿತಿಯನ್ನು ಒದಗಿಸಿ ಅವರ ಆರ್ಥಿಕ, ಸಾಮಾಜಿಕ ಮನಸ್ಥೈರ್ಯ ಬಲಪಡಿಸಲು ರೈತರ ಹೊಲಗಳಲ್ಲಿ ವಿವಿಧ ಪ್ರಾತ್ಯಕ್ಷಿಕೆಗಳನ್ನು ಕೈಗೊಂಡು, ಕೃಷಿ ತಂತ್ರಜ್ಞಾನ ವರ್ಗಾವಣೆ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.ರೈತರಿಗೆ, ಯುವಕರಿಗೆ, ರೈತ ಮಹಿಳೆಯರಿಗೆ ಮತ್ತು ಸ್ವಸಹಾಯ ಗುಂಪುಗಳಿಗೆ ಕೃಷಿ ಹಾಗೂ ಕೃಷಿಗೆ ಸಂಬಂಧಿಸಿದ ಮತ್ತು ರೈತರ ಆದಾಯ ಹೆಚ್ಚಿಸುವ ಹಲವಾರು ಚಟುವಟಿಕೆಗಳ ಬಗ್ಗೆ ನಿರಂತರವಾಗಿ ತರಬೇತಿ ಹಮ್ಮಿಕೊಳ್ಳುವುದು ಕೃಷಿ ವಿಜ್ಞಾನ ಕೇಂದ್ರದ ಕೆಲವು ಮುಖ್ಯ ಕಾರ್ಯಗಳಾಗಿವೆ.

1. ರಾಯಚೂರು ಜಿಲ್ಲೆಯ ಹಿನ್ನಲೆ

ರಾಯಚೂರು ಜಿಲ್ಲೆಯಲ್ಲಿ ಎರಡು ನದಿಗಳು (ತುಂಗಭದ್ರಾ ಹಾಗೂ ಕೃಷ್ಣಾ) ಹರಿಯುತ್ತಿದ್ದು 'ದೊ–ಆಬ್' ಎಂದು ಐತಿಹಾಸಿಕವಾಗಿ ಬಣ್ಣಿಸಲಾಗಿದ್ದು, ಜಿಲ್ಲೆಯು ರಾಜ್ಯದ ಈಶಾನ್ಯ ಭಾಗದಲ್ಲಿದ್ದು, ಕೃಷಿಯೇ ಪ್ರಮುಖ ಕಸುಬಾಗಿದೆ. ಜಿಲ್ಲೆಯ ವಿಸ್ತೀರ್ಣ 8.36 ಲಕ್ಷ ಹೆ. ಇದ್ದು ಇದರ ಶೇಕಡಾ 72% ರಷ್ಟು ಸಾಗುವಳಿ 1.58 ಪ್ರದೇಶ ಹಾಗೂ ಅರಣ್ಯದಿಂದ ಆವೃತವಾಗಿದೆ. ಜಿಲ್ಲೆಯಲ್ಲಿ ಐದು ತಾಲ್ಲೂಕುಗಳು, 37 ಹೋಬಳಿಗಳು, 878 ಗ್ರಾಮಗಳಿವೆ. 7.12 ಲಕ್ಷ ಹೆ ಭೂಮಿ ಕೃಷಿಗೆ ಯೋಗ್ಯವಾಗಿದ್ದು ಶೇಕಡಾ 37 ರಷ್ಟು ಪ್ರದೇಶದಲ್ಲಿ ನೀರಾವರಿ ಸೌಲಭ್ಯ ಹೊಂದಿದೆ. ಒಟ್ಟು ನೀರಾವರಿಯ ಶೇಕಡಾ 82 ಕಾಲುವೆ ನೀರಾವರಿ ಇದೆ.ಒಟ್ಟು ಸಾಗುವಳಿಯ ಶೇಕಡಾ 49 ಪ್ರದೇಶದಲ್ಲಿ ಏಕದಳ ಧಾನ್ಯಗಳನ್ನು, ಶೇಕಡಾ 14.12 ಪ್ರದೇಶದಲ್ಲಿ ದ್ವಿದಳ ಧಾನ್ಯಗಳು, ಶೇಕಡಾ 31 ಪ್ರದೇಶದಲ್ಲಿ ಎಣ್ಣೆ ಕಾಳು, ಶೇಕಡಾ 5 ಪ್ರದೇಶದಲ್ಲಿ ಹತ್ತಿ ಮತ್ತು ಕಬ್ಬುಗಳನ್ನು ಬೆಳೆಯಲಾಗುತ್ತಿದೆ ಹಾಗೂ ಜಿಲ್ಲೆಯ ವಾರ್ಷಿಕ ಸರಾಸರಿ ಮಳೆ ಪ್ರಮಾಣ 621 ಮಿ. ಮೀ.ಇರುತ್ತದೆ.

ಜಿಲ್ಲೆಯ 60% ರಷ್ಟು ಕಪ್ಪು ಮಣ್ಣು 30% ರಷ್ಟು ಮರಳು ಮಿಶ್ರಿತ ಕೆಂಪು ಮಣ್ಣು ಮತ್ತು ಶೇಕಡಾ 10 ರಷ್ಟು ಗೋಡು ಮಣ್ಣಿದೆ. ಜಿಲ್ಲೆಯ ಒಟ್ಟು ರೈತರಲ್ಲಿ ಶೇಕಡಾ 85 ರಷ್ಟು ಅತೀ ಸಣ್ಣ ಹಾಗೂ ಸಣ್ಣ ರೈತರಿದ್ದಾರೆ ಹಾಗೂ ಶೇಕಡಾ 15 ರಷ್ಟು ಮಧ್ಯಮ ಹಿಡುವಳಿದಾರರಿದ್ದಾರೆ. ನೀರಾವರಿಯಲ್ಲಿ ಭತ್ತ, ಶೇಂಗಾ, ಹತ್ತಿ, ಮೆಣಸಿನಕಾಯಿ ಹಾಗೂ ಮಳೆಯಾಶ್ರಯದಲ್ಲಿ ಸೂರ್ಯಕಾಂತಿ, ಕಡಲೆ, ತೊಗರಿ ಹಾಗೂ ಜೋಳ ಪ್ರಮುಖ ಬೆಳೆಗಳಾಗಿವೆ. ದಾಳಿಂಬೆ, ಮೋಸಂಬಿ, ಮಲ್ಲಿಗೆ ಹಾಗೂ ತರಕಾರಿಗಳು ಪ್ರಮುಖ ತೋಟಗಾರಿಕಾ ಬೆಳೆಗಳು.ಜಿಲ್ಲೆಯ ಜಾನುವಾರು ಸಂಖ್ಯೆ 16.21 ಲಕ್ಷಗಳಾಗಿದ್ದು, ಇದರ ಶೇಕಡ 25% ರಷ್ಟು ದನಕರುಗಳು, ಶೇಕಡ 13 ರಷ್ಟು ಎಮ್ಮೆಗಳು ಇವೆ. ಹೈನುಗಾರಿಕೆಯ ರಾಸುಗಳ ಪೈಕಿ ಶೇಕಡಾ 36% ರಷ್ಟು ಆಕಳುಗಳು ಹಾಗೂ ಶೇಕಡಾ 40% ರಷ್ಟು ಎಮ್ಮೆಗಳನ್ನು ಉನ್ನತೀಕರಿಸಲಾಗಿದೆ.

ಜಿಲ್ಲೆಯ ಪ್ರಮುಖ ಬೆಳೆಗಳಲ್ಲಿ ಬರುವ ವಿವಿಧ ಸಮಸ್ಯೆಗಳನ್ನು ಪರಿಹರಿಸಲು ಕೃಷಿ ವಿಜ್ಞಾನ ಕೇಂದ್ರವು ವಿಶೇಷವಾಗಿ ಹತ್ತಿ ಬೆಳೆಯಲ್ಲಿ ಸಮಗ್ರ ಕೀಟ ನಿರ್ವಹಣೆ, ಕಡಲೆ ಮತ್ತು ತೊಗರಿ ಬೆಳೆಯಲ್ಲಿ ಉತ್ಪಾದನಾ ತಾಂತ್ರಿಕತೆ, ಸೂರ್ಯಕಾಂತಿ ಹಾಗೂ ಶೇಂಗಾ ಬೆಳೆಯ ಸಮಗ್ರ ಬೆಳೆ ನಿರ್ವಹಣೆ, ಭತ್ತದ ಬೆಳೆಯಲ್ಲಿ ನೀರು ಹಾಗೂ ಪೋಷಕಾಂಶಗಳ ನಿರ್ವಹಣೆ, ತೋಟಗಾರಿಕೆ ಬೆಳೆಗಳಲ್ಲಿ

ಮೋಸಂಬಿ, ದಾಳಿಂಬೆ ಹಾಗೂ ಮಲ್ಲಿಗೆ ಬೆಳೆಗಳಲ್ಲಿ ಉತ್ಪಾದನಾ ತಾಂತ್ರಿಕತೆ, ಹೈನುಗಾರಿಕೆಯಲ್ಲಿ ಶುದ್ಧ ಹಾಗೂ ಅಧಿಕ ಹಾಲು ಉತ್ಪಾದನೆ, ಮಹಿಳೆಯರಿಗಾಗಿ ಆದಾಯ ಉತ್ಪನ್ನ ಚಟುವಟಿಕೆಗಳು, ಮಕ್ಕಳು ಹಾಗೂ ಮಹಿಳೆಯರಿಗೆ ಆಹಾರ ಮತ್ತು ಆರೋಗ್ಯ ಇವೇ ಮುಂತಾದ ವಿಷಯಗಳ ಮೇಲೆ ಒತ್ತು ಕೊಟ್ಟು ಕಾರ್ಯ ನಿರ್ವಹಿಸುತ್ತಿದೆ.

1. ಜಿಲ್ಲೆಯ ಬಗ್ಗೆ

1	ಒಟ್ಟು ತಾಲೂಕಗಳು	–	7 (37 ಹೋಬಳಿಗಳು)– 164 ಗ್ರಾಮ ಪಂಚಾಯತಿಗಳು ಮತ್ತು 830 ಗ್ರಾಮಗಳು
2	ಭೂಮಿ ಬಳಕೆ ಮಾದರಿ	–	72 % ಕೃಷಿ ಬೂಮಿ
		–	2.17 % ಅರಣ್ಯ ಭೂಮಿ
3	ಮಣ್ಣಿನ ವಿಧಗಳು		ಕಪ್ಪು ಮಣ್ಣು 60%, ಕೆಂಪು ಮಣ್ಣು 30% ಮತ್ತು ಮೆಕ್ಕಲು ಮಣ್ಣು 10%
4	ಕಾರ್ಯಚರಣೆ ಭೂಮಿ ಹಿಡುವಳಿಗಳು	–	85 % ಸಣ್ಣ ಮತ್ತು ಅತಿಸಣ್ಣ ರೈತರು
		–	15 % ಮಧ್ಯಮ ಹಾಗೂ ದೊಡ್ಡ ರೈತರು
5	ನೀರಾವರಿಯ ಮೂಲ	–	ಶೇ. 82 ಕಾಲುವೆ ನೀರಾವರಿ
6	ಜಾನುವಾರು	–	36–40 % ತಳಿ ಸಂವರ್ಧಿತ ಹಸು ಮತ್ತು ಎಮ್ಮೆಗಳು
		–	ಒಟ್ಟು ಹೈನುರಾಸುಗಳಲ್ಲಿ ಶೇ 65 ರಷ್ಟು ಹಸುಗಳು
7	ಒಟ್ಟು ಸ್ವ–ಸಹಾಯ ಸಂಘಗಳು	–	4760 ಸ್ವ–ಸಹಾಯ ಸಂಘಗಳು (89 ಯುವತಿ ಮಂಡಳಿಗಳು ಮತ್ತು 1486 ಯುವಕ ಮಂಡಳಿಗಳು)

- **ರಾಯಚೂರು ಜಿಲ್ಲೆಯ ಸಾಮಾನ್ಯ ಮಾಹಿತಿ**

ಭೌಗೋಳಿಕ ವಿಸ್ತೀರ್ಣ	8,35,843 ಹೆ.
ಸಾಗುವಳಿ ಕ್ಷೇತ್ರ	6,95,787 ಹೆ.
ಅರಣ್ಯ	18,167 ಹೆ.
ಸಾಗುವಳಿಗೆ ಲಭ್ಯವಿಲ್ಲಿದಿರುವ ಭೂಮಿ	40,647 ಹೇ.
ಸಾಗುವಳಿ ಮಾಡದಿರುವ ಇತರೆ ಭೂಮಿ	44,212 ಹೆ.
